## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهِ وَاَمْرِهِ

بِسْمِ اللهِ الرَّحْمٰنِ الرَّحِيْمِ    نَحْمَدُهُ وَنُصَلِّى عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللهُ بِبَدْرٍ وَّاَنْتُمْ اَذِلَّةٌ

**ವರ್ಷ:** 02

**ಕನ್ನಡ ಬದರ್ ವಾರ ಪತ್ರಿಕೆ**
**WEEKLY BADAR QADIAN KANNADA**

**ಸಂಚಿಕೆ:** 45

**ವಾರ್ಷಿಕ ಶುಲ್ಕ ರೂ.575/–**

**ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.**

**11 ನವೆಂಬರ್ 2021, 11 ನಬುವ್ವತ್ 1400 ತಬ್‌ಲೀಗ್ ಹಿಜರಿ ಶಮ್‌ಸಿ, 05 ರಬೀಉಸ್ಸಾನಿ 1443 ಹಿಜರಿ ಖಮರಿ.**

## ಅಲ್ಲಾಹನ ಉಪದೇಶ

وَلَا تَمْشِ فِى الْاَرْضِ مَرَحًا ۚ
اِنَّكَ لَنْ تَخْرِقَ الْاَرْضَ
وَلَنْ تَبْلُغَ الْجِبَالَ طُوْلًا

**(ಬನೀ ಇಸ್ರಾಈಲ್: 38)**

**ಅಂದರೆ: ನೀನು ಭೂಮಿಯಲ್ಲಿ ಅಹಂಭಾವದಿಂದ ನಡೆಯಬೇಡ. ಏಕೆಂದರೆ ನೀನು ಭೂಮಿಯನ್ನು ಸೀಳಲಾರೆ. ಎತ್ತರದಲ್ಲಿ ನೀನು ಪರ್ವತಗಳನ್ನು ತಲಪಲಾರೆ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಭಿಕ್ಷೆ ಬೇಡಲು ಖಂಡನೆ ಮತ್ತು ಅದರಿಂದ ದೂರವಿರಲು ಉತ್ತೇಜನ.

(1480) ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ. ನಬಿ ಕರೀಂ(ಸ) ನುಡಿದರು. ನಿಮ್ಮಲ್ಲಿ ಯಾರು ತನ್ನ ಹಗ್ಗ ತೆಗೆದುಕೊಂಡು ಮುಂಜಾನೆ ಗುಡ್ಡಗಾಡಿಗೆ ಹೋಗಿ ಸೌದೆಯನ್ನು ಸಂಗ್ರಹಿಸಿ ಅದನ್ನು ಮಾರಾಟ ಮಾಡಿ ಜೀವನ ಸಾಗಿಸುತ್ತಾರೋ, ಮತ್ತು ಅದರಲ್ಲಿ ಸದಖಾ (ದಾನ) ನೀಡುತ್ತಾರೋ ಅದು ಭಿಕ್ಷೆ ಬೇಡುವುದಕ್ಕಿಂತ ಉತ್ತಮವಾಗಿದೆ.

### ತನ್ನ ಸದಖಾ ಮಾಡಿದ ವಸ್ತುವನ್ನು ಖರೀದಿಸುವುದು ನಿಷಿದ್ಧವಾಗಿದೆ.

(1489) ಹಝ್ರತ್ ಅಬ್ದುಲ್ಲ ಬಿನ್ ಮುರ್(ರ) ವರದಿ ಮಾಡುತ್ತಾರೆ. ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅಲ್ಲಾಹನ ಮಾರ್ಗದಲ್ಲಿ ಒಂದು ಕುದುರೆಯನ್ನು ಸದಖಾ (ದಾನ) ಮಾಡಿದರು. ಮತ್ತೆ ಆ ಕುದುರೆ ಮಾರಾಟವಾಗುತ್ತಿರುವುದನ್ನು ನೋಡಿ ಅದನ್ನು ಖರೀದಿಸಬಯಸಿದರು. ಅವರು ನಬಿ(ಸ) ರವರ ಬಳಿಗೆ ಬಂದು ಪ್ರವಾದಿಯವರೊಂದಿಗೆ(ಸ) ಅನುಮತಿ ಯಾಚಿಸಿದರು. ಆಗ ನೆಬಿ(ಸ) ನುಡಿದರು. ತನ್ನ ಸದಖಾ (ದಾನ) ವನ್ನು ಹಿಂಪಡೆಯಬೇಡಿರಿ. **(ಸಹೀಹ್ ಬುಖಾರಿ, ಸಂಪುಟ–3, ಕಿತಾಬುಝ್ಝಕಾತ್, ಮುದ್ರಣ ಖಾದಿಯಾನ್ 2008)**

## ನಾನು ನನ್ನ ಜಮಾಅತಿಗೆ ಉಪದೇಶ ನೀಡುವುದೇನೆಂದರೆ ಅಹಂಕಾರದಿಂದ ದೂರವಿರಿ. ಏಕೆಂದರೆ ಅಹಂಕಾರವು ನಮ್ಮ ಪ್ರಭುವಿನ ದೃಷ್ಟಿಯಲ್ಲಿ ಅತ್ಯಂತ ಅಸಹ್ಯಕರವಾಗಿದೆ.

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನಾನು ನನ್ನ ಜಮಾಅತಿಗೆ ಉಪದೇಶ ನೀಡುವುದೇನೆಂದರೆ ಅಹಂಕಾರದಿಂದ ದೂರವಿರಿ. ಏಕೆಂದರೆ ಅಹಂಕಾರವು ನಮ್ಮ ಪ್ರಭುವಿನ ದೃಷ್ಟಿಯಲ್ಲಿ ಅತ್ಯಂತ ಅಸಹ್ಯಕರವಾಗಿದೆ. ಆದರೆ ಬಹುಶಃ ನೀವು ಅಂದಾಜಿಸಲಾರಿರಿ. ಅಹಂಕಾರ ಯಾವರೀತಿ ಆಗಿದೆ ಎಂದು. ಆದುದರಿಂದ ನನ್ನಿಂದ ತಿಳಿದುಕೊಳ್ಳಿರಿ, ನಾನು ದೇವಾತ್ಮದಿಂದ ನುಡಿಯುತ್ತಿದ್ದೇನೆ.

ಪ್ರತಿಯೊಬ್ಬ ವ್ಯಕ್ತಿ ಯಾರು ತನ್ನ ಸಹೋದರನನ್ನು ಕೀಳಾಗಿ ಕಾಣುವನೋ ಮತ್ತು ತನ್ನನ್ನು ಅವನಿಗಿಂತ ಹೆಚ್ಚು ಜ್ಞಾನಿ ಅಥವಾ ಹೆಚ್ಚು ಬುದ್ಧಿವಂತ ಅಥವಾ ಹೆಚ್ಚು ಕುಶಲಮಿತಿ ಎಂದು ಭಾವಿಸುವನು ಅವನು ಅಹಂಕಾರಿಯಾಗಿದ್ದಾನೆ. ಏಕೆಂದರೆ ಅವನು ಅಲ್ಲಾಹನನ್ನು ಜ್ಞಾನ ಹಾಗೂ ಬುದ್ಧಿವಂತಿಕೆಯ ಮೂಲವೆಂದು ತಿಳಿಯುವುದಿಲ್ಲ. ಬದಲು ತನ್ನನ್ನು ಒಂದು ಅರ್ಹ ವಸ್ತು ಎಂದು ಭಾವಿಸುತ್ತಾನೆ. ಅಲ್ಲಾಹನು ನಿಮ್ಮನ್ನು ಹುಚ್ಚನಾಗಿ ಮಾಡಲು ಶಕ್ತನಲ್ಲವೇ? ಯಾರನ್ನು ನೀವು ಸಣ್ಣವರು ಮತ್ತು ನೀವು ಅವನಿಗಿಂತ ಜ್ಞಾನ ಬುದ್ಧಿವಂತಿಕೆಯಲ್ಲಿ ಉತ್ತಮವೆಂದು ಭಾವಿಸುವಿರೋ, ಅಲ್ಲಾಹನು ಅವನಿಗೆ ಅದನ್ನು ದಯಪಾಲಿಸಬಹುದು. ಅದೇ ರೀತಿ ಒಬ್ಬ ವ್ಯಕ್ತಿ ತನ್ನ ಸಂಪತ್ತು, ಹಾಗೂ ಗೌರವಗಳಿಂದ ತಾನು ದೊಡ್ಡವನೆಂದು ಭಾವಿಸಿ ತನ್ನ ಸಹೋದರನನ್ನು ಕೀಳಾಗಿ ಕಂಡರೆ ಅವನು ಸಹ ಅಹಂಕಾರಿಯಾಗಿದ್ದಾನೆ. ಏಕೆಂದರೆ ಈ ಗೌರವ, ಸಂಪತ್ತು ಅಲ್ಲಾಹನೇ ನೀಡಿರುವನು ಎಂಬುದನ್ನು ಮರೆತು ಅಂಧನಾಗಿದ್ದಾನೆ. ಆ ವ್ಯಕ್ತಿ ಅರಿಯುವುದಿಲ್ಲ ದೇವನು ಸರ್ವಶಕ್ತನು ಅವನ ಮೇಲೆ ಗ್ರಹಚಾರ ಅವತರಿಸಬಹುದು. ಅದರಿಂದ ಏಕಕಾಲದಲ್ಲಿ "ಅಸ್ಫಲ ಸಾಫಿಲೀನ್" ಅಧಮರಲ್ಲಿ ಅಧಮನಾಗಿ ಬೀಡುವನು. ಕೀಳಾಗಿ ಭಾವಿಸುತ್ತಿದ್ದ ತನ್ನ ಸಹೋದರನಿಗೆ ಅವನಿಗಿಂತಲೂ ಉತ್ತಮ ಸಂಪತ್ತು ದಯಪಾಲಿಸಬಹುದು. ಅಂತೆಯೇ ತನ್ನ ಆರೋಗ್ಯದ ಮೇಲೆ ಗರ್ವಪಡುವ ವ್ಯಕ್ತಿ ಅಥವಾ ತನ್ನ ಸೌಂದರ್ಯದ ಮೇಲೆ ಅಥವಾ ಬಲಶಕ್ತಿಯ ಮೇಲೆ ಗರ್ವಪಡುವನು, ತನ್ನ ಸಹೋದರನ ಮೇಲೆ ಹಾಸ್ಯ ಮಾಡುವನು, ಕೀಳು ಹೆಸರಿನಿಂದ ಕರೆಯುವುದು, ಅವನ ನ್ಯೂನತೆಗಳನ್ನು ಇನ್ನೊಬ್ಬರ ಮುಂದೆ ಹೇಳುವುದು, ಅವನು ಸಹ ಅಹಂಕಾರಿಯಾಗಿದ್ದಾನೆ. ಅವನು ಆ ದೇವನಿಂದ ಅಜ್ಞಾನಿಯಾಗಿದ್ದಾನೆ. ಅವನಿಗೆ ತಕ್ಷಣ ಭಯಂಕರವಾದ ರೋಗ ಅವರಿಸಿಕೊಳ್ಳಬಹುದು. ತನ್ನ ಸಹೋದರಿಗಿಂತ ಅಧಮನನ್ನಾಗಿ ಮಾಡಬಹುದು. ಯಾರನ್ನು ಅವನು ಅವಹೇಳನ ಮಾಡಿದ್ದನೋ ಒಂದು ದೀರ್ಘ ಸಮಯದವರೆಗೆ ಅವನಿಗೆ ಶಕ್ತಿ ಸಾಮರ್ಥ್ಯ ದಯಪಾಲಿಸಬಹುದು. ಅದು ಕಡಿಮೆ ಆಗದಂತೆ, ಮಿಥ್ಯಗೊಳ್ಳದಂತೆ, ಅವನು ಬಯಸಿದ್ದನ್ನು ಮಾಡಬಹುದಾಗಿದೆ. ಅದೇ ರೀತಿ ತನ್ನ ಬಾಹುಬಲದ ಮೇಲೆ ಭರವಸೆ ಹೊಂದಿದ ವ್ಯಕ್ತಿ ದುಆ ಆಪೇಕ್ಷಿಸಲಿಲ್ಲ ಎಂದರೆ ಅವನು ಸಹ ಅಹಂಕಾರಿಯೇ. ಏಕೆಂದರೆ ಎಲ್ಲ ಬಲಗಳ ಮೂಲ ಮತ್ತು ಶಕ್ತಿಗಳ ಮೂಲವಾದ ದೇವನನ್ನು ಅವನು ಗುರುತಿಸಲಿಲ್ಲ. ಬದಲಾಗಿ ತನ್ನನ್ನೇ ದೊಡ್ಡವನನ್ನಾಗಿ ಭಾವಿಸಿಕೊಂಡಿದ್ದಾನೆ.

ಆದುದರಿಂದ ಓ ನನ್ನ ಪ್ರಿಯರೇ! ಈ ಎಲ್ಲಾ ಮಾತುಗಳಿಗೆ ಲಕ್ಷ್ಯವಹಿಸಿ ನೆನಪಿಡಿರಿ. ಯಾವುದೇ ರೀತಿಯಲ್ಲಿ ನೀವು ಅಲ್ಲಾಹನ ದೃಷ್ಟಿಯಲ್ಲಿ ಅಹಂಕಾರಿಯಾಗಿ ಪರಿಗಣಿಸದಿರಲಿ, ನಿಮಗೆ ಅರಿವಾಗದ ರೀತಿಯಲ್ಲಿ, ವ್ಯಕ್ತಿಯೊಬ್ಬನು ತನ್ನ ಸಹೋದರನು ತಪ್ಪಾಗಿ ಬರೆದ ಒಂದು ಪದವನ್ನು ಅಹಂಕಾರದಿಂದ ತಿದ್ದುವವನಾದರೇ ಅದು ಸಹ ಅಹಂಕಾರವೇ ಆಗಿದೆ. ವ್ಯಕ್ತಿಯೊಬ್ಬನು ತನ್ನ ಸಹೋದರನ ಮಾತುಗಳನ್ನು ವಿನಮ್ರದಿಂದ ಆಲಿಸುವುದಿಲ್ಲ ಮತ್ತು ಮುಖ ತಿರುಗಿಸಿಕೊಂಡರೆ ಅದು ಸಹ ಅಹಂಕಾರವಾಗಿದೆ. ಒಬ್ಬ ಬಡವನಾದ ಸಹೋದರನು ಒಬ್ಬನ ಬಳಿ ಕುಳಿತಿದಿದ್ದರೆ, ಅದರಿಂದಾಗಿ ಅವನು ಅಸಹ್ಯಪಡುವವನಾದರೆ ಅದು ಸಹ ಅಹಂಕಾರದಿಂದ ಪಾಲು ಪಡೆದಂತೆ. ವ್ಯಕ್ತಿಯೊಬ್ಬನು ಪ್ರಾರ್ಥನೆ ಮಾಡುವವನನ್ನು ಅಪಹಾಸ್ಯದಿಂದ ಕಾಣುವನಾದರೆ ಅವನು ಸಹ ಅಹಂಕಾರಪಟ್ಟಂತೆ. ಅಲ್ಲಾಹನ ಮಾರ್ಗದರ್ಶಕರನ್ನು, ಪ್ರವಾದಿಯನ್ನು ಪೂರ್ಣ ರೀತಿಯಲ್ಲಿ ಅನುಸರಣೆ ಮಾಡದಿದ್ದರೆ ಅವನು ಸಹ ಅಹಂಕಾರದಿಂದ ಭಾಗ ಪಡೆದಂತೆ. ಮತ್ತು ಯಾರು ಅಲ್ಲಾಹನ ಮಾರ್ಗದರ್ಶಕರನ್ನು ಪ್ರವಾದಿಯ ಮಾತುಗಳನ್ನು ಶ್ರದ್ಧೆಯಿಂದ ಆಲಿಸುವುದಿಲ್ಲ ಮತ್ತು ಅವರ ಗ್ರಂಥಗಳನ್ನು ಗಮನವಹಿಸಿ ಓದುವುದಿಲ್ಲ. ಅವನು ಸಹ ಅಹಂಕಾರದ ಒಂದು ಭಾಗ ಪಡೆದಂತೆ. ಆದುದರಿಂದ ತಮ್ಮಲ್ಲಿ ಅಹಂಕಾರದ ಯಾವ ಭಾಗವು ಇರದಂತೆ ನೋಡಿಕೊಳ್ಳಿರಿ. ಏಕೆಂದರೆ ನೀವು ನಾಶವಾಗದಿರಲಿಕ್ಕೆ ಮತ್ತು ನೀವು ಕುಟುಂಬ ಸಮೇತ ಮುಕ್ತಿ ಪಡೆಯುವಂತಾಗಲಿಕ್ಕೆ.

**(ನುಝೂಲುಲ್ಲ ಮಸೀಹ್, ರೂಹಾನಿ ಖಝಾಈನ್ ಸಂಪುಟ–18, ಪುಟ–402)**

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰه

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِي الْعَالَمِ ۞ شَرُّ السُّمُوْمِ عَدَاوَةُ الصُّلَحَاءِ

**ಪಾದರಿ ಪತಹ್ ಮಸೀಹ್ ಆಗಲಿ ಅಥವಾ ಬೇರೆ ಯಾರಾದರೂ ಕ್ರೈಸ್ತ ಪಾದರಿಗಳೂ ಸ್ವರ್ಗವಾಸಿಗಳಿಗೆ ಆಧ್ಯಾತ್ಮಿಕ ಪ್ರತಿಫಲದ ಬಗ್ಗೆ ಪವಿತ್ರ ಖುರ್‌ಆನ್‌ಗಿಂತ ಇಂಜೀಲಿನಲ್ಲಿದೆ ಎಂದು ಸಾಬೀತುಪಡಿಸಿದರೆ ಅವರಿಗೆ ಒಂದು ಸಾವಿರ ರೂಪಾಯಿಗಳ ಭಾರಿ ಬಹುಮಾನ ನೀಡುವೆನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ ನೂರುಲ್–ಖುರಆನ್ ನಂಬ್ರ 2 ರಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು, ಪಾದರಿ ಫತಹ್ ಮಸೀಹ್ ಪತಹಗಢದ ನಿವಾಸಿ ಜಿಲ್ಲಾ ಗುರುದಾಸಪೂರ ಅವರ ಕೆಲವು ಅತ್ಯಂತ ನಾಚಿಕೆಗೇಡು ಮತ್ತು ಗೊಂದಲಕಾರಿ ಆರೋಪ.ಬ ಆಕ್ಷೇಪಗಳಿಗೆ ಉತ್ತರವನ್ನು ನೀಡಿದ್ದಾರೆ. ಅದು ಅವರು ನಮ್ಮ ಪ್ರವಾದಿಗಳ ನಾಯಕ ಲೋಕಸೃಷ್ಟಿಗೆ ಕಾರಣಕರ್ತರಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಮತ್ತು ಅವರ ಪವಿತ್ರ ಪತ್ನಿಯರ ಮೇಲೆ ಮಾಡಿದ್ದರು. ಅದೇ ರೀತಿ ಅವರ ಇನ್ನು ಕೆಲವು ಇಸ್ಲಾಮಿ ಶಿಕ್ಷಣಗಳ ಮೇಲೆ ಮಾಡಿದ ಆರೋಪಗಳೂ ಇದ್ದವು. ಈ ಸಂಚಿಕೆಯಲ್ಲಿ ನಾವು ಫತಹ್ ಮಸೀಹ್ ಮಾಡಿದ ಇಸ್ಲಾಮಿನ ಶಿಕ್ಷಣಗಳ ಮೇಲಿನ ಆರೋಪಗಳಿಗೆ ಉತ್ತರವಾಗಿ ಸಯ್ಯದ್‌ನಾ ಹಜ್‌ರತ್ ಮಸೀಹ್ ಮೌಊದ್(ಅ) ನೀಡಿದ ಇನ್ನೊಂದು ವೈಭವಯುತ ಪಂಥ್ವಾಹ್ವಾನದ ವಿವರ ನೀಡುವೆವು. ಪಾದರಿ ಫತಹ ಮಸೀಹ್ ಇಸ್ಲಾಮಿ ಶಿಕ್ಷಣಗಳ ಬಗ್ಗೆ ಮಾಡಿದ ಬಹಳಷ್ಟು ಆರೋಪಗಳಲ್ಲಿ ಒಂದು ಆರೋಪ ಸ್ವರ್ಗದ ಬಗ್ಗೆ ಇರುವ ಶಿಕ್ಷಣ ಕೇವಲ ಸ್ವೇಚ್ಛಾಚಾರದ್ದಾಗಿವೆ. ಅದರಿಂದ ಒಬ್ಬ ದೇವನಿಷ್ಟನು ತೃಪ್ತನಾಗಲು ಸಾಧ್ಯವಿಲ್ಲ. ಅದರಿಂದ ಅವನ ವಿವರಣೆಯು ತಾತ್ಪರ್ಯವೇನೆಂದರೆ ಸ್ವರ್ಗದಲ್ಲಿ ಆಧ್ಯಾತ್ಮಿಕ ಪ್ರತಿಫಲಗಳ ಬಗ್ಗೆ ವಿವರ ಇಲ್ಲ. ಕೇವಲ ದೈಹಿಕ ಪ್ರತಿಫಲದ್ದೇ ವಿವರಣೆ ಇದೆ. ಪವಿತ್ರ ಖುರ್‌ಆನ್‌ನಲ್ಲಿ ಸ್ವರ್ಗವಾಸಿಗಳಿಗೆ ವಿವಿಧ ಐಹಿಕ ಅನುಗ್ರಹಗಳ ವಿವರಗಳಿವೆ. ಉದಾಹರಣೆಗೆ ಜೀವಿತ ಹರಿತ್ವಗಳು, ಪರಿಶುದ್ಧ ಹಾಗೂ ರುಚಿಕರ ಶರಬತ್ತುಗಳ ಮತ್ತು ವಿಭಿನ್ನ ಫಲಗಳ ಬಗ್ಗೆ ವಿವರವಿದೆ. ಅದೇ ರೀತಿ ಸುಂದರ ಯುವತಿಯರು ಇತ್ಯಾದಿ ವಿವರವಿದೆ. ಅದರಿಂದ ಫತಹ್ ಮಸೀಹ್ ಅಂದಜಿಸಿದ್ದೇನೆಂದೆ, ಮುಸಲ್ಮಾನರ ಸ್ವರ್ಗವು ಕೇವಲ ದೈಹಿಕ ವಸ್ತುಗಳದ್ದೇ ಆಗಿದೆ. ಆಧ್ಯಾತ್ಮಿಕತೆಗೆ ಯಾವ ಸ್ಥಾನವು ಇಲ್ಲ. ಫತಹ ಮಸೀಹರ ಈ ಆರೋಪ ಅವರಿಗಿರುವ ಅಲ್ಪಜ್ಞಾನವೇ ಕಾರಣವಾಗಿದೆ ಅಥವಾ ಅವರ ಕುತ್ಸಿತಬುದ್ಧಿಯಾಗಿದೆ. ವಾಸ್ತವವೇನೆಂದರೆ ಸ್ವರ್ಗದಲ್ಲಿ ಆಧ್ಯಾತ್ಮಿಕ ಹಾಗೂ ದೈಹಿಕ ಎರಡೂ ಸ್ವಾದಗಳ ವಸ್ತುಗಳಾಗುವವು. ಇಹಲೋಕದಲ್ಲಿರುವಂತೆ ಸ್ವರ್ಗದಲ್ಲಿ ಆತ್ಮಕ್ಕೂ ಒಂದು ದೇಹ ಒದಗಿಸಲಾಗುವುದು ಆದುದರಿಂದ ಅಲ್ಲಿ ಆಧ್ಯಾತ್ಮಿಕ ಸ್ವರ್ಗದ ಜೊತೆಯಲ್ಲಿ ದೈಹಿಕ ಐಶ್ವರ್ಯದ ಸಾಮಾನುಗಳು ಸಹ ಇರುವುದು. ಆದರೆ ಇಲ್ಲಿ ದೊರೆಯುವಂತಹ ದೇಹದ ಹಾಗೆ ಅಲ್ಲಿ ಐಹಿಕ ದೇಹಗಳಿರುವುದಿಲ್ಲ. ಯಾವ ಅನುಗ್ರಹಗಳ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಲಾಗಿದೆಯೋ ಅದೆಲ್ಲ ಸಾದೃಶ್ಯರೂಪಗಳದ್ದಾಗಿವೆ. ಏಕೆಂದರೆ ಅದರಿಂದ ಮನುಷ್ಯನು ಒಂದಿಷ್ಟು ಆ ಅನುಗ್ರಹಗಳ ಬಗ್ಗೆ ತಿಳಿದಿರುವಂತಾಗಬೇಕು. ಅಲ್ಲಾಹನು ಅವರಿಗಾಗಿ ಏನೆಲ್ಲ ಅನುಗ್ರಹಗಳನ್ನೂ ದಯಪಾಲಿಸಲಿದ್ದಾನೆ ಎಂದು, ಇಲ್ಲದಿದ್ದರೆ ಸ್ವರ್ಗದ ಯಥಾರ್ಥ ಅನುಗ್ರಹಗಳ ಬಗ್ಗೆ ಯಾರಿಗೂ ಜ್ಞಾನ ಇಲ್ಲ. ಖುರ್‌ಆನ್‌ನಲ್ಲಿ ಹೀಗಿದೆ.

**ಫಲಾ ತಲಮು ನಫ್‌ಸುಮ್ಮಾ ಉಖ್‌ಫಿಯ ಲಹುಮ್ಮಿನ್ ಖುರ್ರತಿ ಆಯುನಿನ್, ಜಝಾಅಮ್‌ಬಿಮಾ ಕಾನೂ ಯಅ್‌ಮಲೂನ್**

ಅಂದರೆ ವಾಸ್ತವವೇನೆಂದರೆ ಸತ್ಯವಿಶ್ವಾಸಿಗಳಿಗೆ ಅವನ ಸತ್ಕರ್ಮಗಳ ಪ್ರತಿಫಲವಾಗಿ ಏನೆಲ್ಲ ಅನುಗ್ರಹಗಳು ಗೌಪ್ಯವಿಡಲಾಗಿದೆ. ಯಾರೂ ಸಹ ತಿಳಿದಿಲ್ಲ.

ಹಾಗೆಯೇ ಹಝ್ರತ್ ರಸೂಲುಲ್ಲಾಹ್(ಸ) ನುಡಿದರು. "ಹಝ್ರತ್ ಅಬೂಹರೈರ(ರ) ವರದಿ ಮಾಡುತ್ತಾರೆ. ಹಝ್ರತ್ ರಸೂಲುಲ್ಲಾಹ್(ಸ) ಒಂದು ಸಂದರ್ಭದಲ್ಲಿ ಹೇಳಿದರು. ಅಲ್ಲಾಹನು ಹೇಳುವನು. ನಾನು ನನ್ನ ನಿಷ್ಠ ದಾಸರಿಗೆ ಎಂತೆಂತಹ ಅನುಗ್ರಹಗಳು ತಯಾರಿಸಿಟ್ಟಿದ್ದೇನೆಂದರೆ, ಅದನ್ನು ಯಾವ ಕಣ್ಣು ನೋಡಿರಲಿಕ್ಕಿಲ್ಲ. ಯಾವ ಕಿವಿ ಕೇಳಿರಲಿಕ್ಕಿಲ್ಲ. ಅಲ್ಲದೇ ಯಾವ ಮನುಷ್ಯನು ತನ್ನ ಮನಸಸಿನಲ್ಲೂ ಊಹಿಸಿರಲಿಕ್ಕಿಲ್ಲ. ಅದನ್ನು ದೃಢಿಕರಿಸಬೇಕಾಗಿದ್ದಲ್ಲಿ ನೀವು ಈ ವಚನ ಪಠಿಸಿರಿ. ಯಾವ ಮನುಷ್ಯ ತಿಳಿದಿರಲಿಕ್ಕಿಲ್ಲ. ಅವನ ಸತ್ಕರ್ಮಗಳ ಪ್ರತಿಫಲವಾಗಿ ಏನೆಲ್ಲ ಅನುಗ್ರಹಗಳು ಗೌಪ್ಯವಿಡಲಾಗಿದೆ ಎಂದು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಪಾದರಿ ಫತಹ ಮಸೀಹನಿಗೆ ಪಂಥಾಹ್ವಾನ ನೀಡಿದರು. ಪಾದರಿ ಫತಹ ಮಸೀಹ್ ಆಗಲಿ ಅಥವ ಯಾವ ಕ್ರೈಸ್ತ ಪಾದರಿಯಾಗಲಿ ಅವರು ಸ್ವರ್ಗವಾಸಿಗಳಿಗೆ ಆಧ್ಯಾತ್ಮಿಕ ಪ್ರತಿಫಲಗಳ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿರುವುದಕ್ಕಿಂತ ಹೆಚ್ಚು ಇಂಜಿಲಿನಲ್ಲಿದೆ ಎಂದು ಸಾಬೀತು ಮಾಡಿದರೆ ಅವರಿಗೆ ನಾವು ಒಂದು ಸಾವಿರ ರೂಪಾಯಿ ನಗದು ಬಹುಮಾನ ನೀಡುವೆವು. ಪಾದರಿ ಫತಹ ಮಸೀಹನ ಆಕ್ಷೇಪಗಳ ಉತ್ತರ ಮತ್ತು ಅದೇ ರೀತಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರು ಮಾಡಿದ ವೈಭವಯುತ ಬಹುಮಾನದ ಪಂಥಾಹ್ವಾನದ ಬಗ್ಗೆ ನಾವು ಈ ಕೆಳಗೆ ಅವರ ಪದಗಳಲ್ಲಿಯೇ ವಿವರಿಸುವೆವು.

### ಕ್ರೈಸ್ತರು ಸ್ವಯಂ ಒಪ್ಪಿಕೊಳ್ಳುತ್ತಾರೆ. ಶಿಕ್ಷೆಗೋಸ್ಕರ ಆತ್ಮ ಮತ್ತು ದೇಹ ಎರಡನ್ನೂ ನರಕದಲ್ಲಿ ಹಾಕಲಾಗುವುದು ಎಂದು ಹಾಗಾದರೆ ಪ್ರತಿಫಲದ ವಿಷಯದಲ್ಲಿ ದೇಹವನ್ನು ಏಕೆ ಹೊರತುಪಡಿಸಬೇಕು?

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ತಿಳಿದಿರಲಿ ಈ ಮಾತು ಸುಸ್ಪಷ್ಟವಾಗಿದೆ ಮತ್ತು ವಿವೇಕಯುತವಾಗಿದೆ. ಹಾಗೂ ನ್ಯಾಯಸಮ್ಮತವಾಗಿದೆ. ಹೇಗೆ ಮನುಷ್ಯನು ಲೋಕದಲ್ಲಿ ಅಪರಾಧ ಎಸಗುವುದರಲ್ಲಾಗಲೀ ಅಥವಾ ದಾನ ಸತ್ಕರ್ಮಗಳ ಸಮಯದಲ್ಲಾಗಲಿ ಕೇವಲ ಆತ್ಮದಿಂದ ಕಾರ್ಯ ಕೈಗೊಳ್ಳುವುದಿಲ್ಲ. ಬದಲು ಆತ್ಮ ಮತ್ತು ಶರೀರ ಎರಡೂ ಉಪಯೋಗಿಸುತ್ತಾನೆ. ಅದೇ ರೀತಿ ಶಿಕ್ಷೆ ಮತ್ತು ಪ್ರತಿಫಲದ ಪ್ರಭಾವವು ಸಹ ಎರಡರ ಮೇಲೂ ಆಗಬೇಕಾಗಿದೆ. ಅಂದರೆ ಜೀವ (ಆತ್ಮ) ಮತ್ತು ದೇಹ ಎರಡರಲ್ಲೂ ಸಹ ತಮ್ಮ ತಮ್ಮ ಸ್ಥಿತಿಯ ಅನುಸಾರವಾಗಿ ಪರಲೋಕದಲ್ಲೂ ಭಾಗಿಯಾಗಬೇಕಾಗಿದೆ. ಆದರೆ ಕ್ರೆಸ್ತ ಬಾಂಧವರ ಬಗ್ಗೆ ಅಚ್ಚರಿಪಡಬೇಕಾಗುತ್ತದೆ. ಶಿಕ್ಷೆಯ ವಿಷಯದಲ್ಲಂತೂ ಈ ತತ್ವವನ್ನು ಒಪ್ಪಿಕೊಳ್ಳುತ್ತಾರೆ. ಮತ್ತು ಸ್ವೀಕರಿಸುತ್ತಾರೆ. ಯಾವ ಜನರು ತಮ್ಮ ದುಷ್ಕರ್ಮಗಳಿಂದ ದೇವರನ್ನು ಅಸಂತುಷ್ಟರನ್ನಾಗಿ ಮಾಡುತ್ತಾರೆ. ಅವರಿಗೆ ಕೊಡಲಾಗುವ ಶಿಕ್ಷೆಯು ಕೇವಲ ಆತ್ಮಕ್ಕೆ ಸೀಮಿತವಿರಲಾರದು. ಬದಲು ಆತ್ಮ ಮತ್ತು ದೇಹ ಎರಡನ್ನೂ ನರಕಕ್ಕೆ ಹಾಕಲಾಗುವುದು. ಗಂಧಕದ ಅಗ್ನಿಯಿಂದ ದೇಹವನ್ನು ಸುಡಲಾಗುವುದು. ಅಲ್ಲಿ ಅವರಿಗೆ ಅಳಬೇಕಾಗುವುದು. ದಂತ ಬೀಸಬೇಕಾಗುವುದು ಮತ್ತು ಅವರು ಬಾಯಾರಿಕೆಯಿಂದ ಸುಡಲ್ಪಡುವುದು. ಅವರಿಗೆ ನೀರು ಸಿಗಲಾರದು. ಕ್ರೈಸ್ತ ಸಾಹೇಬರುಗಳೊಂದಿಗೆ ಈ ದೇಹವನ್ನು ಏಕೆ ಸುಡಲಾಗುವುದು ಎಂಬ ವಿಷಯ ಪ್ರಸ್ತಾಪಿಸಿದರೆ. ಆಗ ಅವರ ಉತ್ತರವಿರುತ್ತದೆ. ಸಹೋದರ ಆತ್ಮ ಮತ್ತು ದೇಹ ಎರಡೂ ಕಾರ್ಮಿಕ ರೀತಿಯಲ್ಲಿ ದುಡಿಯುತ್ತಾರೆ. ಅಂದ ಹಾಗೆ ಎರಡೂ ತನ್ನ ಒಡೆಯನ ಕಾರ್ಯದಲ್ಲಿ ವಂಚನೆ ಮಾಡಿದರೆ ಎರಡೂ ಶಿಕ್ಷೆಗೆ ಅರ್ಹರಾಗುತ್ತಾರೆ. ಹಾಗಾದರೆ. ಓ ಅಂಧರೇ! ಅಲ್ಲಾಹನ ಇಂಗಿತ ಅರಿಯುವುದರಲ್ಲಿ ಅಜ್ಞಾನಿಗಳೇ, ನಿಮಗೆ ನಿಮ್ಮ ಮಾತಿನಿಂದಲೇ ಅಪರಾದಿಯನ್ನಾಗಿಸುವೆನು. ಅಲ್ಲಾಹನ ಕರುಣೆ ಅವನ ಕ್ರೋಧಗಳ ಮೇಲೆ ಆಧಿಪತ್ಯವಹಿಸಿದೆ. ಅವನು ಶಿಕ್ಷೆ ನೀಡುವಾಗ ದೇಹವನ್ನು ಬಿಡದಿದ್ದಾಗ ಪ್ರತಿಫಲ ನೀಡುವ ಸಮಯದಲ್ಲಿ ಅದೇ ತತ್ವ ಅನುಸರಿಸುವುದು ಅನಿವಾರ್ಯವಾಗಿರುವುದಿಲ್ಲವೇ? ನಾವು ಆ ಕರುಣಾಮಯಿ ಅಲ್ಲಾಹನ ಮೇಲೆ ಅನುಮಾನಪಡಬೇಕೇ? ಶಿಕ್ಷೆ ನೀಡುವಾಗ ಅವನ ಪ್ರಕೋಪ ಎಷ್ಟೊಂದು ಉದ್ರೇಕಗೊಳ್ಳುತ್ತದೆ ಎಂದರೆ ನಮ್ಮ ದೇಹಗಳನ್ನು ಅಗ್ನಿ ಕುಂಡಕ್ಕೆ ಹಾಕಲಾಗುತ್ತದೆ. ಅದೇ ಪ್ರತಿಫಲ ನೀಡುವ ಸಮಯ ಬಂದಾಗ ಅವನ ಕರುಣೆ ಇಮ್ಮಡಿಸುವುದಿಲ್ಲವೇ? ಅಂದ ಹಾಗೆ ಶಿಕ್ಷೆ ನೀಡುವಾಗ ದೇಹವನ್ನು ಪ್ರತ್ಯೇಕಿಸಲಾಗುತ್ತಿದ್ದರೆ ನಿಸ್ಸಂಶಯವಾಗಿ ಪ್ರತಿಫಲ ನೀಡುವಾಗಲೂ ದೇಹವನ್ನು ಪ್ರತ್ಯೇಕಿಸಲಾಗುತ್ತಿತ್ತು. ಆದರೆ ಶಿಕ್ಷೆ ಕೊಡುವ ಸಮಯದಲ್ಲಿ ದೇಹವನ್ನು ಸಹ ಪಾಪದಲ್ಲಿ ಸಹಭಾಗಿ ಎಂದು ಭಾವಿಸಿ ಸುಡುವ ಅಗ್ನಿಯಲಿ ಹಾಕುವುದಾರೆ ಓ ಅಂಧರೇ! ಓ ಅಲ್ಪಜ್ಞಾನಿಗಳೇ! ಅವನು ಸತ್ಯವಿಶ್ವಾಸ ಮತ್ತು ಸತ್ಕರ್ಮಗಳ ವಿಷಯದಲ್ಲಿ ದೆಹವನ್ನು ಭಾಗಿಯಾಗಿಸುವುದಿಲ್ಲವೇ? ಶವಗಳಿಗೆ ಜೀವ ನೀಡುವಾಗ ಅನಾವಶ್ಯಕವಾಗಿ ದೇಹ ಕೊಡಲಾಗುವುದೆ.

**ದೇಹವು ಯಾವ ರೀತಿ ಶಿಕ್ಷೆಯ ಅವಸ್ಥೆಯಲ್ಲಿ ದುಃಖಪಡುತ್ತದೆಯೋ ಅದೇ ರೀತಿ ಪ್ರತಿಫಲ ಸಯದಲ್ಲೂ ಒಂದು ರೀತಿ ಸುಖವು ಸಹ**

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಪ್ರಪಂಚದ ಇತಿಹಾಸವು ತಿಳಿದಿರುವ ಸಮಯದಿಂದಲೂ, ಫಾರೂಖ್-ಎ-ಆಝಮ್(ರ)ಯಷ್ಟು ವಿಜಯಶಾಲಿ ಹಾಗೂ ನ್ಯಾಯವಂತ ಅರಸನಿಲ್ಲ. ವಿಜಯಗಳು ಗಳಿಸಿತು ಮತ್ತು ನ್ಯಾಯವನ್ನು ಸ್ಥಾಪಿಸಲಾಯಿತು**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರತ್ ಉಮರ್(ರ) ರವರ ಖಿಲಾಫತ್ ಕಾಲದಲ್ಲಿ ಉಂಟಾದ ಬೃಹತ್ ವಿಜಯಗಳ ಕಾರಣಗಳು**

**ಹಝ್ರತ್ ಉಮರ್(ರ)ರವರ ಶಹಾದತ್ತಿನ ಘಟನೆಯ ವಿವರಾತ್ಮಕ ಪ್ರಸ್ತಾವನೆ**

**ಎರಡು ದಿವಂಗತರಾದ ಇಂಡೋನೇಶಿಯದ ಮುಬಲ್ಲಿಗ್‌ರಾದ ಸನ್ಮಾನ್ಯ ಖಮರುದ್ದೀನ್ ಸಾಹಿಬ್, ಮತ್ತು ಸುಲ್ತಾನ್ ಅಹ್ಮದ್ ಹಾರೂನ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಬೀಹ ಹಾರೂನ್ ಸಾಹಿಬರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **08-10-2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಕಾಲದ ವಿಜಯಗಳ ಪ್ರಸ್ತಾಪ ನಡೆದಿತ್ತು. ಹಝ್ರತ್ ಉಮರರ(ರ) ಜೀವನಚರಿತ್ರೆ ಬರೆದ ಒಬ್ಬ ಚರಿತ್ರೆಗಾರನಾದ ಅಲ್ಲಾಮ ಶಿಬ್‌ಲಿ ನುಅ್‌ಮಾನಿ ಹಝ್ರತ್ ಉಮರರ(ರ) ವಿಜಯಗಳ ಮತ್ತು ಅವುಗಳ ಕಾರಣಗಳ ಬಗ್ಗೆ ಪ್ರಸ್ತಾಪಿಸುತ್ತಾ ಬರೆಯುತ್ತಾರೆ: ಮರುಭೂಮಿ ನಿವಾಸಿಗಳಾದ ಕೆಲವರು ಹೇಗೆ ಇರಾನ್ ಮತ್ತು ರೋಮಿನ ಸಿಂಹಾಸನಗಳನ್ನು ಉರುಳಿಸಿದರು ಎಂಬ ಸವಾಲು ತಕ್ಷಣ ಒಬ್ಬ ಚರಿತ್ರೆಗಾರನ ಮನಸ್ಸಿನಲ್ಲಿ ಹುಟ್ಟಬಹುದು.

ಇದು ಲೋಕಚರಿತ್ರೆಯ ಬೇರ್ಪಟ್ಟ ಘಟನೆಯಾಗಿದೆಯೇ? ಈ ವಿಜಯಗಳನ್ನು ಅಲೆಕ್ಸಾಂಡರ್ ಮತ್ತು ಚಂಗೇಝ್‌ಖಾನಿನ ವಿಜಯದೊಂದಿಗೆ ಹೋಲಿಸಬಹುದೇ? ನಡೆದ ಘಟನೆಗಳಲ್ಲಿ ಖಲೀಫರ ಪಾತ್ರ ಎಷ್ಟಿತ್ತು? ನಾವು ಇದಕ್ಕೆ ಉತ್ತರಗಳನ್ನು ನೀಡಲು ಬಯಸುತ್ತೇವೆ. ಆದರೆ ಮೊದಲು ಸಂಕ್ಷಿಪ್ತವಾಗಿ ಹಝ್ರತ್ ಉಮರ್(ರ) ಜಯಿಸಿದ ಪ್ರದೇಶಗಳ ವಿಸ್ತೀರ್ಣದ ಬಗ್ಗೆ ಹೇಳಲು ಬಯಸುತ್ತೇವೆ. ಹಝ್ರತ್ ಉಮರ್(ರ) ಗೆದ್ದ ದೇಶಗಳ ಒಟ್ಟು ವಿಸ್ತೀರ್ಣ 22 ಲಕ್ಷ, 21 ಸಾವಿರ ಮೂವತ್ತು ಚದುರ ಮೈಲುಗಳಾಗಿತ್ತು. ಈ ಎಲ್ಲ ವಿಜಯಗಳು ಹಝ್ರತ್ ಉಮರರ(ರ) ವಿಜಯಗಳು ಮಾತ್ರವಾಗಿವೆ. ಇದನ್ನು ಜಯಿಸಲು ತೆಗೆದ ಕಾಲಾವಧಿ ಹತ್ತು ವರ್ಷಕ್ಕಿಂತ ಸ್ವಲ್ಪ ಹೆಚ್ಚಾಗಿತ್ತು. ಈ ವಿಜಯಗಳ ಬಗ್ಗೆ ಮನವರಿಕೆ ಮಾಡಿಕೊಳ್ಳಲು ಮುನ್ನುಡಿಯಾಗಿ ಈ ಸಂಗತಿಯನ್ನು ಹೇಳುವುದು ಆವಶ್ಯಕವಾಗಿತ್ತು. ಈ ವಿಜಯಗಳ ಕುರಿತು ಯುರೋಪಿನ ಚರಿತ್ರೆಗಾರರ ಅಭಿಪ್ರಾಯವೇನೆಂದರೆ, ಆ ಸಮಯದಲ್ಲಿ ರೋಮ್ ಮತ್ತು ಇರಾಕಿನ ಆಡಳಿತಗಳ ವೈಭವ ನಷ್ಟವಾಗಿತ್ತು. ಖುಸ್ರೋಪರ್‌ವೇಝಿನ ನಂತರ ಇರಾನಿನ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿಯೂ ಅಡಿಮೇಲಾಗಿತ್ತು. ಆಡಳಿತವನ್ನು ನಡೆಸಲು ಯೋಗ್ಯನಾದ ವ್ಯಕ್ತಿ ಅಲ್ಲಿ ಇರಲಿಲ್ಲ. ಅರಮನೆಯ ಮುಖಂಡರು ಮತ್ತು ಸದಸ್ಯರಲ್ಲಿ ಪಿತೂರಿಗಳು ಶುರುವಾಗಿತ್ತು. ಈ ಕುತಂತ್ರಗಳ ಕಾರಣದಿಂದಲೇ ಸಿಂಹಾಸನದಲ್ಲಿ ಬೇರೆ ಬೇರೆ ಅರಸರು ಬಂದು ಹೋಗುತ್ತಿದ್ದರು. ಮೂರ್‍ನಾಲ್ಕು ವರ್ಷಗಳಲ್ಲೇ ಅಧಿಕಾರ ಆರೇಳು ರಾಜರ ಕೈಗಳಿಗೆ ಬಂದು ಹೋಯಿತು. ನೌಶೀರ್‌ವಾನ್ ಅಧಿಕಾರಕ್ಕೆ ಬರುವುದಕ್ಕೆ ಸ್ವಲ್ಪ ಮುಂಚೆ ನಾಸ್ತಿಕ ಪಂಗಡವಾದ ಮಝ್‌ದಿಖ ಬಹಳ ಪ್ರಬಲಗೊಂಡಿತ್ತು. ಅವರ ಪ್ರಕಾರ ಹೃದಯಗಳಿಂದ ಲಾಲಸೆ ಮತ್ತು ಇತರ ಭಿನ್ನಾಭಿಪ್ರಾಯಗಳನ್ನು ದೂರಮಾಡಬೇಕು. ಧರ್ಮ ಸ್ವಚ್ಛ ಮತ್ತು ಪರಿಶುದ್ಧವಾಗಲು ಸ್ತ್ರೀ ಸಮೇತ ಎಲ್ಲ ಸಂಪತ್ತುಗಳನ್ನು ಸಾರ್ವಜನಕ ಸ್ವತ್ತನ್ನಾಗಿ ಗಣಿಸಬೇಕು. ಎಂದರೆ, ಸ್ತ್ರೀಯರಿಗೂ ಯಾವುದೇ ಗೌರವವಿರಲಿಲ್ಲ. ನೌಶೀರ್‌ವಾನನು ಖಡ್ಗಬಲದಿಂದ ಈ ಧರ್ಮವನ್ನು ಅದುಮಿ ಹಾಕಿದ್ದನು. ಆದರೆ ಸಂಪೂರ್ಣವಾಗಿ ಅಳಿಸಲು ಸಾಧ್ಯವಾಗಲಿಲ್ಲ. ಧಾರ್ಮಿಕ ವಿಶ್ವಾಸಗಳಿಗೆ ಮುಸ್ಲಿಮರು ಅಡ್ಡಿಯಾಗಿ ನಿಲ್ಲದ ಕಾರಣದಿಂದ ಇಸ್ಲಾಂ ಧರ್ಮವು ಇರಾನಿಗೆ ಹೆಜ್ಜೆ ಹಾಕಿದಾಗ, ಆ ಧರ್ಮದವರು ಇಸ್ಲಾಮನ್ನು ತಮ್ಮ ಅಭ್ಯುದಾತವೆಂದು ಗಣಿಸಿದರು. ಇದು ಯುರೋಪಿಯನ್ ಚರಿತ್ರೆಗಾರರ ಅಭಿಪ್ರಾಯವಾಗಿದೆ.

ಅದೇ ರೀತಿಯಲ್ಲಿ ಕ್ರೈಸ್ತರ ನಸ್ತೂರಿ ಪಂಗಡಕ್ಕೆ ಯಾವುದೇ ಸರ್ಕಾರದಲ್ಲಿ ಅಭಯ ಸಿಗುತ್ತಿರಲಿಲ್ಲ. ಅವರು ಇಸ್ಲಾಮಿನ ನೆರಳಿನಲ್ಲಿ ಬಂದು ವಿರೋಧಿಗಳ ದೌರ್ಜನ್ಯಗಳಿಂದ ರಕ್ಷಣೆ ಪಡೆದರು. ಈ ರೀತಿಯಲ್ಲಿ ಮುಸ್ಲಿಮರಿಗೆ ಎರಡು ದೊಡ್ಡ ಪಂಗಡಗಳ ಸಹಾನುಭೂತಿ ಮತ್ತು ನೆರವು ಉಚಿತವಾಗಿ ಲಭಿಸಿದವು. ರೋಮಿನ ಸರ್ಕಾರ ಸ್ವತಃ ದುರ್ಬಲಗೊಂಡಿತ್ತು. ಅದರೊಂದಿಗೆ ಕ್ರೈಸ್ತರಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳು ಆ ದಿನಗಳಲ್ಲಿ ಶಕ್ತಗೊಂಡಿದ್ದುವು. ಆ ಸಮಯದಲ್ಲಿ ಧರ್ಮಕ್ಕೆ ಆಡಳಿತ ವ್ಯವಸ್ಥೆಯಲ್ಲಿ ಸ್ಥಾನವಿತ್ತು. ಆದ್ದರಿಂದ ಆ ಭಿನ್ನಾಭಿಪ್ರಾಯದ ಪ್ರಭಾವದಿಂದ ಸರ್ಕಾರ ಕೂಡ ದುರ್ಬಲಗೊಳ್ಳುತ್ತಿತ್ತು. ಈ ಹೇಳಿಕೆಗಳನ್ನೆಲ್ಲ ಅಲ್ಲಗಳೆಯುತ್ತಾ ಅಲ್ಲಾಮ ಶಿಬ್ಲಿ ನುಅ್‌ಮಾನಿ ಹೇಳುತ್ತಾರೆ: ಇವು ಸಂಪೂರ್ಣವಾಗಿ ತಪ್ಪೆಂದು ನಾನು ಹೇಳುವುದಿಲ್ಲ. ನಿಸ್ಸಂಶಯವಾಗಿಯೂ ಆ ಸಮಯದಲ್ಲಿ ಇರಾನ್ ಮತ್ತು ರೋಮಿನ ಆಡಳಿತಗಳು ಬಹಳ ಶಕ್ತವಾಗಿರಲಿಲ್ಲ. ದೊಡ್ಡ ದೊಡ್ಡ ಆಡಳಿತಗಳನ್ನು ಅವರಿಗೆ ಆ ಸಮಯದಲ್ಲಿ ಎದುರಿಸಲು ಸಾಧ್ಯವಿರಲಿಲ್ಲವೆಂದು ಮಾತ್ರ ಹೇಳಬಹುದು. ಆದರೆ ಸಾಧನ ಸಾಮಗ್ರಿಗಳು ಏನೂ ಇಲ್ಲದಂತಹ ಅರೇಬಿಯದ ಸಮುದಾಯವನ್ನು ಎದುರಿಸಿದ ಕಾರಣದಿಂದ ಪುಡಿಪುಡಿಯಾಗುವಷ್ಟು ದುರ್ಬಲವೂ ಅವುಗಳು ಆಗಿರಲಿಲ್ಲ. ರೋಮ್ ಮತ್ತು ಇರಾನ್ ಯುದ್ಧತಂತ್ರಗಳಲ್ಲಿ ನಿಪುಣವಾಗಿದ್ದುವು. ಗ್ರೀಕ್‌ನಲ್ಲಿ ವಿಶೇಷವಾಗಿ ಯುದ್ಧ ನಿಯಮಗಳ ಕುರಿತು ಪುಸ್ತಕಗಳನ್ನು ಬರೆಯಲಾಗಿತ್ತು. ಅವು ಈಗಲೂ ಇವೆ. ರೋಮನರು ಒಂದು ದೀರ್ಘಕಾಲದ ವರೆಗೆ ಅವುಗಳ ಪ್ರಕಾರ ಯುದ್ಧಗಳನ್ನು ನಡೆಸುತ್ತಿದ್ದರು. ಅದಲ್ಲದೇ ಸಂಚಾರದ ವ್ಯವಸ್ಥೆಯಿತ್ತು, ವಿವಿಧ ತರದ ಯುದ್ಧ ಸಾಮಗ್ರಿಗಳನ್ನು ಹೊಂದಿದ್ದರು. ಮಾತ್ರವಲ್ಲ ತಮ್ಮ ಕೋಟೆಗಳಲ್ಲಿ ಮತ್ತು ಕಂದಕಗಳಲ್ಲಿ ಇದ್ದುಕೊಂಡೇ ದೇಶವನ್ನು ಸಂರಕ್ಷಿಸಬೇಕಾಗಿತ್ತು. ಮುಸ್ಲಿಮರು ದಾಳಿ ಮಾಡುವುದಕ್ಕೆ ಸ್ವಲ್ಪ ಮುಂಚೆ, ಖುಸ್ರೋ ಪರ್‌ವೇಝ್‌ನ ಆಡಳಿತದಲ್ಲಿ ರೋಮಿನ ಅರಸನು ಇರಾನ್ ಮೇಲೆ ಹಲ್ಲೆ ನಡೆಸಿದನು. ಹೆಜ್ಜೆ ಹೆಜ್ಜೆಗೂ ವಿಜಯಗಳನ್ನು ಗಳಿಸುತ್ತಾ ಅಸ್‌ಫಹಾನ್ ತನಕ ತಲುಪಿದನು. ಇರಾನಿಯರು ವಶಪಡಿಸಿದ ಸಿರಿಯದ ರಾಜ್ಯಗಳನ್ನು ಅವನು ಮರಳಿ ಪಡೆದನು. ಪುನಃ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಿದನು. ಇರಾನನಲ್ಲಿ ಖುಸ್ರೋ ಪರ್‌ವೇಝ್ ತನಕ ಆಡಳಿತವು ಅತ್ಯಂತ ವೈಭವದಿಂದಲೇ ಇತ್ತು ಎಂಬುದು ಸಾಮಾನ್ಯವಾಗಿ ಒಪ್ಪಲಾದ ಸಂಗತಿಯಾಗಿದೆ. ಖುಸ್ರೋ ಪರ್‌ವೇಝ್‌ನ ಮರಣದ ಕಾಲದಿಂದ ಹಿಡಿದು ಮುಸ್ಲಿಮರ ದಾಳಿ ತನಕ ಮೂರ್‍ನಾಲ್ಕು ವರ್ಷಗಳ ವ್ಯತ್ಯಾಸ ಮಾತ್ರವಿರುವುದು. ಇಷ್ಟು ಸ್ವಲ್ಪ ಕಾಲದಲ್ಲಿ ಇಂತಹ ಸಮುದಾಯ ಮತ್ತು ಆಡಳಿತ ಎಷ್ಟು ದುರ್ಬಲವಾಗಲು ಸಾಧ್ಯ? ರಾಜರ ಅದಲುಬದಲುಗಳ ಕಾರಣದಿಂದ ಆಡಳಿತ ವ್ಯವಸ್ಥೆಯಲ್ಲಿ ಅಲ್ಪವುಟ್ಟಿಗೆ ಬದಲಾವಣೆ ಆಗಿರಬಹುದು. ಆದರೆ ಅದರಿಂದ ಆಡಳಿತ ವಿಭಾಗಗಳಲ್ಲಿ ಯಾವುದೇ ಕೊರತೆ ಉಂಟಾಗಿರಲಿಲ್ಲ. ಆದ್ದರಿಂದ ಯಝ್‌ದಜರ್ದ್ ಸಿಂಹಾಸನವನ್ನು

ಏರಿದ ನಂತರ ಅರಮನೆಯ ಸದಸ್ಯರು ಸುಧಾರಣೆ ಕಡೆಗೆ ಗಮನ ಹರಿಸಿದ ಕೂಡಲೇ ಪುನಃ ಆಡಳಿತದ ವೈಭವ ಮರಳಿಬಂದಿತ್ತು. ಮಝ್‌ದಿಖಿ ಪಂಗಡ ಇರಾನಿನಲ್ಲಿ ಇದ್ದರೂ ಅವರಿಂದ ಮುಸ್ಲಿಮರಿಗೆ ಯಾವುದೇ ರೀತಿಯ ಸಹಾಯ ಲಭಿಸಿದಾಗಿ ಚರಿತ್ರೆಯಿಂದ ತಿಳಿದುಬರುವುದಿಲ್ಲ. ಅದೇ ರೀತಿಯಲ್ಲಿ ನಸ್ತೂರಿ ಪಂಗಡದಿಂದ ಯಾವುದೇ ರೀತಿಯ ಸಹಾಯ ಲಭಿಸಿದಾಗಿ ತಿಳಿದುಬಂದಿಲ್ಲ. ನಸ್ತೂರಿ ಎಂಬುದು ಕ್ರೈಸ್ತರ ಒಂದು ಪಂಗಡವಾಗಿದೆ. ಅದರ ವಿಶ್ವಾಸವೇನೆಂದರೆ, ಹಝ್ರ‌ತ್ ಈಸಾರಲ್ಲಿ ದೈವಿಕ ಗುಣ ಮತ್ತು ಮಾನುಷಿಕ ಗುಣ ಬೇರೆ ಬೇರೆಯಾಗಿ ಇವೆ ಎಂದಾಗಿದೆ.

ಇನ್ನೊಂದು ಕಡೆ ಈಜಿಪ್ಟ್, ಇರಾನ್, ರೋಮ್‌ನಲ್ಲಿ ಯುದ್ಧಗಳಲ್ಲಿ ನಿರತರಾಗಿದ್ದ ಅರೇಬಿಯದ ಸೈನ್ಯದ ಪೂರ್ಣ ಸಂಖ್ಯೆಬಲ ಒಂದು ಲಕ್ಷಕ್ಕಿಂತಲೂ ಕಡಿಮೆಯಾಗಿತ್ತು. ಅದಲ್ಲದೇ ರೂಢಿಯಲ್ಲಿದ್ದ ಯುದ್ಧ ಅಸ್ತ್ರಗಳನ್ನು ಅವರು ಹೊಂದಿರಲಿಲ್ಲ ಮತ್ತು ಹೊಸ ಯುದ್ಧತಂತ್ರಗಳನ್ನು ಅವರು ಅರಿತಿರಲಿಲ್ಲ. ಒಟ್ಟಿನಲ್ಲಿ ಈ ಸವಾಲಿನ ಯಥಾರ್ಥ ಉತ್ತರವೇನೆಂದರೆ, ಮುಸ್ಲಿಮರಲ್ಲಿ ಆ ಸಮಯದಲ್ಲಿ ಹಝ್ರ‌ತ್ ಪೈಗಂಬರರ(ಸ) ಕಾರಣದಿಂದ ಆವೇಶ, ದೃಢನಿರ್ಧಾರ, ಸ್ಥಿರತೆ, ಉನ್ನತ ಮಟ್ಟದ ಧೈರ್ಯ ಮತ್ತು ಶೌರ್ಯ ಉಂಟಾಗಿತ್ತು. ಅದನ್ನು ಹಝ್ರ‌ತ್ ಉಮರ್(ರ) ಇನ್ನೂ ಹೆಚ್ಚು ವರ್ಧಿಸಿದರು.

ಅದನ್ನು ರೋಮ್ ಮತ್ತು ಇರಾನಿನ ಆಡಳಿತಗಳಿಗೆ ಶಕ್ತಶಾಲಿಯಾದ ಕಾಲದಲ್ಲೂ ಎದುರಿಸಲು ಸಾಧ್ಯವಾಗುತ್ತಿರಲಿಲ್ಲ. ಅದರೊಂದಿಗೆ ಇಸ್ಲಾಮಿಗೆ ಬೇರೆ ಕೆಲವು ಸಂಗತಿಗಳು ಲಭಿಸಿದ್ದುವು. ಅವು ಇಸ್ಲಾಮಿಕ ಆಡಳಿತ ನಡೆಸಲು ಸಹಾಯಕವಾದುವು. ಅವುಗಳಲ್ಲಿ ಮೊತ್ತಮೊದಲ ಸಂಗತಿ ಮುಸ್ಲಿಮರ ಸತ್ಯಸಂಧತೆ ಮತ್ತು ಪ್ರಾಮಾಣಿಕತೆ ಆಗಿದ್ದುವು. ಮುಸ್ಲಿಮರು ಗೆದ್ದ ದೇಶದ ಜನರು ಮುಸ್ಲಿಮರ ಸತ್ಯಸಂಧತೆಯಿಂದ ಎಷ್ಟು ಪ್ರಭಾವಿತರಾಗಿದ್ದರು ಎಂದರೆ, ಧಾರ್ಮಿಕ ಭಿನ್ನಾಭಿಪ್ರಾಯಗಳಿದ್ದರೂ ಅವರು ಇಸ್ಲಾಮಿನ ಆಡಳಿತದ ಅವನತಿಯನ್ನು ಬಯಸುತ್ತಿರಲಿಲ್ಲ. ಯರ್ಮೂಕ್ ಯುದ್ಧಕ್ಕೆ ಮುಂಚಿತವಾಗಿ ಮುಸ್ಲಿಮರು ಸಿರಿಯದ ಜಿಲ್ಲೆಗಳಿಂದ ಹೊರಟಾಗ, ಅಲ್ಲಿಯ ಎಲ್ಲ ಕ್ರೈಸ್ತ ಪ್ರಜೆಗಳು ಜೋರಾಗಿ ಹೀಗೆ ಹೇಳುತ್ತಿದ್ದರು: ದೇವನು ನಿಮ್ಮನ್ನು ಪುನಃ ಈ ದೇಶಕ್ಕೆ ಮರಳಿ ತರಲಿ. ಯಹೂದಿಗಳು ತಮ್ಮ ಕೈಯಲ್ಲಿ ತೌರಾತನ್ನು ಹಿಡಿದುಕೊಂಡು ಹೀಗೆ ಹೇಳುತ್ತಿದ್ದರು: ನಾವು ಜೀವಂತವಾಗಿ ಇರುವ ವರೆಗೂ ಸೀಸರ್ ಇಲ್ಲಿಗೆ ಬರುವಂತಿಲ್ಲ. ಸಿರಿಯ ಮತ್ತು ಈಜಿಪ್ಟಿನಲ್ಲಿದ್ದ ರೋಮಿನ ಆಡಳಿತವು ಬಹಳ ದೌರ್ಜನ್ಯಕರವಾದುದಾಗಿತ್ತು. ಆದ್ದರಿಂದ ರೋಮನರು ಆಡಳಿತ ಮತ್ತು ಸೈನ್ಯಬಲದಿಂದ ಪ್ರಜೆಗಳನ್ನು ಯುದ್ಧಕ್ಕೆ ನೂಕಿದ್ದರು. ಪ್ರಜೆಗಳು ಅವರ ಜೊತೆಗೆ ಇರಲಿಲ್ಲ. ಮುಸ್ಲಿಮರು ರೋಮನ್ ಆಡಳಿತದ ಶಕ್ತಿಯನ್ನು ಮುರಿದಾಗ ಮುಂದಿನ ದಾರಿ ಸಂಪೂರ್ಣವಾಗಿಯೂ ಸ್ವಚ್ಛವಾಗಿತ್ತು. ಇಸ್ಲಾಮಿಕ ಸರ್ಕಾರಕ್ಕೆ ಯಾವುದೇ ಅಡಚಣೆಗಳು ಇರಲಿಲ್ಲ. ಎಂದರೆ ಪ್ರಜೆಗಳ ಕಡೆಯಿಂದ ಯಾವುದೇ ವಿಧದ ಅಡ್ಡಿಯಿರಲಿಲ್ಲ. ಆದರೆ ಇರಾನಿನ ಅವಸ್ಥೆ ಇದಕ್ಕೆ ವಿಪರೀತವಾಗಿತ್ತು. ಅಲ್ಲಿ ಆಡಳಿತದ ಅಧೀನದಲ್ಲಿ ದೊಡ್ಡ ದೊಡ್ಡ ಸರದಾರರು ಇದ್ದರು. ಅವರು ದೊಡ್ಡ ದೊಡ್ಡ ಜಿಲ್ಲೆಗಳ ಮತ್ತು ರಾಜ್ಯಗಳ ಅಧಿಕಾರಿಗಳಾಗಿದ್ದರು. ಅವರು ಸರ್ಕಾರಕ್ಕಾಗಿ ಅಲ್ಲ, ಬದಲಾಗಿ ತಮ್ಮ ಸ್ವಂತ ಆಡಳಿತಕ್ಕಾಗಿ ಹೋರಾಡುತ್ತಿದ್ದರು. ಇದೇ ಕಾರಣದಿಂದಲೇ ಮುಸ್ಲಿಮರು ಸಿಂಹಾಸನವನ್ನು ಗೆದ್ದ ನಂತರವೂ ಇರಾನಿನಲ್ಲಿ ಪ್ರತಿ ಹೆಜ್ಜೆಗೂ ಮುಸ್ಲಿಮರಿಗೆ ಅಡ್ಡಿಗಳು ಉಂಟಾಗುತ್ತಿತ್ತು. ಆದರೂ ಸಾಮಾನ್ಯ ಪ್ರಜೆಗಳು ಅಲ್ಲೂ ಮುಸ್ಲಿಮರಿಂದ ಪ್ರಭಾವಿತರಾಗಿದ್ದರು. ಆದ್ದರಿಂದ ವಿಜಯದ ನಂತರ ಆಡಳಿತ ನಡೆಸಲು ಮುಸ್ಲಿಮರಿಗೆ ಸುಲಭವಾಗಿತ್ತು. ಆಡಳಿತ ಸ್ಥಾಪಿಸಲು ಅವರಿಂದ ಸಹಾಯ ಲಭಿಸುತ್ತಿತ್ತು. ಇನ್ನೊಂದು ಕಾರಣವೇನೆಂದರೆ, ಮುಸ್ಲಿಮರ ಮೊದಲ ದಾಳಿ ಸಿರಿಯ ಮತ್ತು ಇರಾಕಿನ ಮೇಲಾಗಿತ್ತು. ಈ ಎರಡೂ ಪ್ರದೇಶಗಳಲ್ಲಿ ಹಲವಾರು ಅರೇಬಿಯರು ನೆಲೆಸಿದ್ದರು. ಸಿರಿಯದಲ್ಲಿ ಡಮಸ್ಕಸಿನ ಅಧಿಕಾರಿಯು ಗಸ್ಸಾನಿ ಕುಟುಂಬದವನಾಗಿದ್ದನು. ಅವನು ಕೇವಲ ಹೆಸರಿಗೆ ಸೀಸರಿನ ಅಧೀನದಲ್ಲಿದ್ದನು. ಇರಾಕಿನಲ್ಲಿ ಲಖ್ಮ್‌ನಿ ಕುಟುಂಬದವರು ದೇಶದ ಮಾಲಿಕರಾಗಿದ್ದರು. ರಾಜನಿಗೆ ಟಾಕ್ಸಾಗಿ ಅಲ್ಪಸ್ವಲ್ಪ ನೀಡುತ್ತಿದ್ದರು. ಅಲ್ಲಿನ ಅರೇಬಿಯರು ಕ್ರೈಸ್ತರಾಗಿದ್ದ ಕಾರಣದಿಂದ ಮೊದಮೊದಲು ಮುಸ್ಲಿಮರನ್ನು ಎದುರಿಸಿದರು. ಆದರೆ ಸಾಮುದಾಯಿಕ ಏಕತೆಯ ಆವೇಶ ಅವರಿಂದ ಅಳಿದು ಹೋಗಿರಲಿಲ್ಲ. ಇರಾಕಿನ ಹಿರಿಯ ಅಧಿಕಾರಿಗಳು ಬಹಳ ಬೇಗನೇ ಮುಸ್ಲಿಮರಾದರು. ಮುಸ್ಲಿಮರಾದ ನಂತರ ಅವರು ಮುಸ್ಲಿಮರ ಸಹಾಯಕರಾದರು. ಸಿರಿಯದಲ್ಲಿ ಕೊನೆಗೆ ಅರೇಬಿಯರು ಇಸ್ಲಾಮನ್ನು ಸ್ವೀಕರಿಸಿದರು ಮತ್ತು ರೋಮನರ ಆಡಳಿತದಿಂದ ಸ್ವತಂತ್ರರಾದರು.

ಇಲ್ಲಿ ಅಲೆಕ್ಸಾಂಡರ್ ಮತ್ತು ಚಂಗೇಝ್ ಖಾನಿನ ಹೆಸರನ್ನು ಹೇಳುವುದು ಕಿಂಚಿತ್ತೂ ಸರಿಯಲ್ಲ. ನಿಸ್ಸಂಶಯವಾಗಿಯೂ ಅವರಿಬ್ಬರೂ ದೊಡ್ಡ ದೊಡ್ಡ ವಿಜಯಗಳನ್ನು ಗಳಿಸಿದ್ದರು. ಆದರೆ ಹೇಗೆ? ಆಕ್ರಮಣ, ದೌರ್ಜನ್ಯ ಮತ್ತು ಸಾಮೂಹಿಕ ಕೊಲೆಗಳನ್ನು ಮಾಡಿ ದೊಡ್ಡ ದೊಡ್ಡ ವಿಜಯಗಳನ್ನು ಗಳಿಸಿದ್ದರು. ಚಂಗೇಝ್ ಖಾನಿನ ಸ್ಥಿತಿಯಂತು ಎಲ್ಲರಿಗೂ ಗೊತ್ತಿದೆ. ಅಲೆಕ್ಸಾಂಡರಿನ ವಿಜಯಗಳನ್ನು ಹೋಲಿಸುವುದಾದರೆ, ಅಲೆಕ್ಸಾಂಡರಿನ ಸ್ಥಿತಿಯೇನಾಗಿತ್ತು ಎಂದರೆ, ಅವನು ಸಿರಿಯದ ಕಡೆಯಿರುವ ಸೂರ್ ಪಟ್ಟಣವನ್ನು ಜಯಿಸಿದಾಗ ಅಲ್ಲಿಯ ಜನರು ದೀರ್ಘಕಾಲ ಸ್ಥೈರ್ಯದಿಂದ ಹೋರಾಡಿದರು. ಆದ್ದರಿಂದ ಅವನು ಸಾರ್ವಜನಿಕ ಕೊಲೆ ನಡೆಸಲು ಆದೇಶ ನೀಡಿದನು. ಒಂದು ಸಾವಿರ ನಾಗರಿಕರನ್ನು ಅಲ್ಲಿಯ ಗೋಡೆಯಲ್ಲಿ ತೂಗು ಹಾಕಿಸಿದನು. ಅದರೊಂದಿಗೆ ಮೂವತ್ತು ಸಾವಿರ ನಿವಾಸಿಗಳನ್ನು ದಾಸ ದಾಸಿಯರನ್ನಾಗಿ ಮಾಡಿ ಮಾರಾಟ ಮಾಡಿಸಿದನು. ಅಲ್ಲಿಯ ಹಳೆಯ ನಿವಾಸಿಗಳಲ್ಲಿ ಮತ್ತು ಸ್ವಾತಂತ್ರ್ಯವನ್ನು ಬಯಸುವವರಲ್ಲಿ ಯಾರನ್ನೂ ಅವನು ಜೀವಂತವಾಗಿ ಬಿಡಲಿಲ್ಲ. ಅದೇ ರೀತಿಯಲ್ಲಿ ಅವನು ಇರಾನಿನ ಪ್ರಾಚೀನ ಪಟ್ಟಣವಾದ ಇಸ್ತಖರ್ ಮೇಲೆ ಜಯ ಸಾಧಿಸಿದಾಗ, ಅಲ್ಲಿಯ ಎಲ್ಲ ಪುರುಷರನ್ನು ಕೊಂದುಹಾಕಿದನು. ಅದೇ ರೀತಿಯ ಅನೇಕ ಕ್ರೌರ್ಯಗಳನ್ನು ಮಾಡಿದ್ದಾಗಿ ಪ್ರಸ್ತಾಪಿಸಲಾಗಿದೆ. ಹೀಗಿರುವಾಗ ಅವುಗಳನ್ನು ಇಸ್ಲಾಮಿನ ವಿಜಯಗಳೊಂದಿಗೆ ಹೋಲಿಸಿ ಹೇಳುವುದು ಹೇಗೆ? ದೌರ್ಜನ್ಯಗಳಿಂದ ಆಡಳಿತ ಸರ್ವನಾಶವಾಗುತ್ತದೆ ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ದೌರ್ಜನ್ಯಕ್ಕೆ ಆಯುಸ್ಸಿಲ್ಲವೆಂಬ ರೀತಿಯಲ್ಲಿ ಇದು ಸರಿಯಾದ ಸಂಗತಿಯಾಗಿದೆ. ಅಲೆಕ್ಸಾಂಡರ್ ಮತ್ತು ಚಂಗೇಝ್ ಖಾನಿನ ಆಡಳಿತ ಕೂಡ ದೀರ್ಘಕಾಲ ಉಳಿಯಲಿಲ್ಲ. ಆದರೆ ಬೇಗದ ವಿಜಯಗಳಿಗೆ ಈ ರೀತಿಯ ರಕ್ತಪಾತ ಫಲಪ್ರದವಾಗಿರುತ್ತದೆ. ಇದರಿಂದ ದೇಶಪೂರ್ತಿ ಹೆದರಿ ಹೋಗುತ್ತದೆ. ಪ್ರಜೆಗಳಲ್ಲಿ ಅನೇಕರು ನಾಶವಾಗುವ ಕಾರಣದಿಂದ ದಂಗೆ ಮತ್ತು ಕಲಹದ ಅವಕಾಶವಿರುವುದಿಲ್ಲ. ಆದ್ದರಿಂದಲೇ ಚಂಗೇಝ್ ಖಾನ್, ಬಖ್ತ್ ನಸರ್, ತೈಮೂರ್, ನಾದಿರ್‌ಶಾಹ್ ಮುಂತಾದವರೆಲ್ಲರೂ ಕ್ರೂರಿಗಳಾಗಿದ್ದರು. ಆದರೆ ಹಝ್ರ‌ತ್ ಉಮರರ(ರ) ವಿಜಯಗಳಲ್ಲಿ ಎಂದಿಗೂ ಕಾನೂನು ಮತ್ತು ನ್ಯಾಯದ ಮಿತಿಗಳನ್ನು ಉಲ್ಲಂಘಿಸಲಾಗುತ್ತಿರಲಿಲ್ಲ.

ಒಂದೆಡೆ ಮನುಷ್ಯರ ಹತ್ಯಾಕಾಂಡ ಇರಲಿ ಅವರಿಗೆ ಮರಗಳನ್ನು ಕೂಡ ಕಡಿದುಹಾಕುವ ಅನುಮತಿ ಇರಲಿಲ್ಲ. ಮಕ್ಕಳು ಮತ್ತು ವೃದ್ಧರ ಮೇಲೆ ದಾಳಿ ಮಾಡಲಾಗಲಿಲ್ಲ. ನಿಜವಾದ ಯುದ್ಧವನ್ನು ಹೊರತುಪಡಿಸಿ, ಯಾರನ್ನೂ ಕೊಲ್ಲಲಾಗಲಿಲ್ಲ. ಅಂದರೆ, ಯುದ್ಧದ ಸಮಯದಲ್ಲಿ ಕೊಲೆಯಾಗಿದರೆ ಆಗಿರಬಹುದು, ಆ ಸಂಗತಿಯನ್ನು ಹೊರತುಪಡಿಸಿ ಬೇರೆಯವರನ್ನು ಕೊಲ್ಲಬೇಡಿ. ಶತ್ರುವನ್ನು ಯಾವುದೇ ಸಮಯದಲ್ಲಿ ಮೋಸಗೊಳಿಸಲು ಅಥವಾ ವಂಚಿಸಲು ಸಾಧ್ಯವಿರುತ್ತಿರಲಿಲ್ಲ. ಶತ್ರುಗಳು ನಿಮ್ಮೊಂದಿಗೆ ಹೋರಾಡಿದರೆ ನೀವು ಮೋಸ ಮಾಡಬೇಡಿ ಎಂದು ಅಧಿಕಾರಿಗಳಿಗೆ ಸೂಚಿಸಲಾಗುತ್ತಿತ್ತು. ಯಾರ ಮೂಗು ಅಥವಾ ಕಿವಿಯನ್ನು ಕತ್ತರಿಸಬೇಡಿ. ಯಾವುದೇ ಮಗುವನ್ನು ಕೊಲ್ಲಬೇಡಿ ಬಹಿರಂಗವಾಗಿ ಹೋರಾಡಿ. ಅದೇ ರೀತಿ ವಿಧೇಯರಾಗಿ ಪುನಃ ಬಂಡಾಯವೆದ್ದವರು, ಅಂದರೆ ಒಮ್ಮೆ ವಿಧೆಯತನ ತೋರಿಸಿ ನಂತರ ಬಂಡಾಯವೆದ್ದವರೊಂದಿಗೆ ಮತ್ತೊಮ್ಮೆ ಒಪ್ಪಂದ ಬರೆಸಿಕೊಂಡು ಅವರಿಗೆ ಕ್ಷಮೆ ನೀಡಲಾಗುತ್ತಿತ್ತು. ಎಲ್ಲಿಯವರೆಗೆ ಎಂದರೆ ಒಮ್ಮೆ ಅರ್‌ಬಸೂಸ್‌ನ ಜನರು ಮೂರು ಮೂರು ಬಾರಿ ಸತತವಾಗಿ ತಮ್ಮ ಒಪ್ಪಂದವನ್ನು ಉಲ್ಲಂಘಿಸಿದ ನಂತರ ಪುನಃ ಹಿಂತಿರುಗುತ್ತಾರೆ (ಅರ್‌ಬಸೂಸ್ ಎಂಬುದು ಸಿರಿಯಾದ ಗಡಿರೇಖೆಯ ಕೊನೆಯ ನಗರವಾಗಿದೆ. ಅದರ ಗಡಿರೇಖೆಯು ಏಷಿಯಾದ ಕೊಚಕ್ ಗಡಿಯಿಂದ ತಾಗಿಕೊಂಡಿದೆ). ಅವರೊಂದಿಗೆ ಏನು ಮಾಡಲಾಯಿತು ಎಂದರೆ ಅವರಿಗೆ ಅವರ ನಗರದಿಂದ ಬಹಿಷ್ಕರಿಸಲಾಯಿತು ಮತ್ತು ಅವರ ಆಸ್ತಿಯನ್ನು ಕೊಂಡಿಕೊಂಡು ಅದಕ್ಕೆ ಹಣ ನೀಡಲಾಯಿತು. ಅದೇ ರೀತಿ ಖೈಬರ್‌ನ ಯಹೂದಿಗಳು ಪಿತೂರಿ ಮತ್ತು ದೇಶದ್ರೋಹದ ಅಪರಾಧಿಯಾಗಿದ್ದರೆ, ಅವರು ತಮ್ಮ ಆಕ್ರಮಿತ ಪ್ರದೇಶಗಳಿಗೆ ಪರಿಹಾರವನ್ನು ಪಡೆಯುತ್ತಿದ್ದರು ಮತ್ತು ಅವರು ಎಲ್ಲೇ ಹೋದರೂ ಅವರಿಗೆ ಎಲ್ಲಾ ರೀತಿಯ ಸಹಾಯವನ್ನು ಒದಗಿಸಿ ಮತ್ತು ಅವರು ಯಾವ ನಗರದಲ್ಲಿ ತಂಗಿರುವಾಗ ಒಂದು ವರ್ಷದವರೆಗೆ ಅವರಿಂದ ಜಿಝ್ಯವನ್ನು ತೆಗೆದುಕೊಳ್ಳಬಾರದು ಎಂದು ಜಿಲ್ಲಾ ಅಧಿಕಾರಿಗಳಿಗೆ ಆದೇಶಗಳನ್ನು ಕಳುಹಿಸಲಾಗಿತ್ತು ಎಂದು ಅವರು ಬರೆಯುತ್ತಾರೆ.

ಅದೇ ರೀತಿ ಅವರು ಬರೆಯುತ್ತಾರೆ ಲೋಕದಲ್ಲಿ ಬೇರೆಯೂ ಮಹಾ ಪರಾಕ್ರಮಿಗಳು ಇದ್ದರು ಎಂದು ಹಝ್ರ‌ತ್ ಉಮರರ(ರ) ಅದ್ಭುತಕರವಾದ ವಿಜಯಗಳ ಪ್ರಭೆಯನ್ನು ಕಡಿಮೆ ಮಾಡಿ ತೋರಿಸಲು

ಕೆಲವರು ಹೇಳುತ್ತಾರೆ. ಆದರೆ ಇಷ್ಟು ಮುಂಜಾಗ್ರತೆ, ನ್ಯಾಯಪಾಲನೆ, ಕ್ಷಮೆಯಿಂದ ಯಾವ ಆಡಳಿತಗಾರ ಒಂದು ಗೇಣಿನಷ್ಟು ಭೂಮಿಯನ್ನು ಜಯಿಸಿದ್ದನು ಎಂದು ಅವರು ತೋರಿಸಲಿ. ಅಲೆಕ್ಸಾಂಡರ್, ಚಂಗೇಝ್‌ಖಾನ್ ಮುಂತಾದವರು ಸ್ವತಃ ಯುದ್ಧದಲ್ಲಿ ಭಾಗವಹಿಸುತ್ತಿದ್ದರು. ಸ್ವತಃ ಸೇನಾಧಿಪತಿಗಳಾಗಿ ಸೈನ್ಯದಲ್ಲಿದ್ದರು. ಇದರಿಂದ ಸೈನ್ಯಕ್ಕೆ ಒಬ್ಬ ನಿಪುಣ ಸೇನಾಧಿಪತಿ ಸಿಕ್ಕಿದಂತಾಗುತ್ತಿತ್ತು. ಅದಲ್ಲದೇ ಸೈನಿಕರಿಗೆ ಧೈರ್ಯವೂ ಬರುತ್ತಿತ್ತು. ತಮ್ಮ ನೇತಾರನಿಗಾಗಿ ಜೀವತ್ಯಾಗ ಮಾಡಲು ಸಹಜವಾಗಿಯೇ ಅವರಲ್ಲಿ ಆವೇಶ ಇರುತ್ತಿತ್ತು. ಆದರೆ ಹಝ್ರತ್ ಉಮರ್(ರ) ತನ್ನ ಸಂಪೂರ್ಣ ಖಿಲಾಫತ್ ಕಾಲದಲ್ಲಿ ಒಮ್ಮೆ ಕೂಡ ಯಾವುದೇ ಯುದ್ಧದಲ್ಲಿ ಭಾಗಿಯಾಗಿರಲಿಲ್ಲ. ಸೈನಿಕರು ಎಲ್ಲೆಡೆ ಹೋರಾಡುತ್ತಿದ್ದರು. ಆದರೆ ಸಂಪೂರ್ಣ ಸೈನ್ಯದ ಲಗಾಮು ಅವರ ಕೈಯಲ್ಲಿ ಇರುತ್ತಿತ್ತು. ಅಲೆಕ್ಸಾಂಡರ್ ಮುಂತಾದವರ ವಿಜಯಗಳು ಮೋಡಗಳಂತಾಗಿದ್ದುವು. ಅದು ಒಂದೇ ಸವನೇ ಶಕ್ತವಾಗಿ ಬಂದು ಹೊರಟುಹೋಯಿತು. ಅಲ್ಲಿ ಯಾವುದೇ ಆಡಳಿತ ವ್ಯವಸ್ಥೆಯನ್ನು ಅವರು ಸ್ಥಾಪಿಸಲಿಲ್ಲ. ಆದರೆ ಹಝ್ರತ್ ಉಮರ್ ಫಾರೂಖ್(ರ) ವಿಜಯಗಳಲ್ಲಿ ಇದ್ದ ಸುದೃಢತೆ ಎಷ್ಟಾಗಿತ್ತೆಂದರೆ, ಮುಸ್ಲಿಮರು ಜಯಿಸಿದ ರಾಜ್ಯಗಳು ಹದಿಮೂರು ಶತಮಾನಗಳ ನಂತರವೂ ಇಂದು ಕೂಡ ಇಸ್ಲಾಮಿನ ವಶದಲ್ಲಿ ಇವೆ.

ಕೊನೆಯದಾಗಿ ಸಾಮಾನ್ಯವಾಗಿ ಹೇಳಲಾಗುವ ಸಂಗತಿಯೇನೆಂದರೆ, ಈ ವಿಜಯಗಳಲ್ಲಿ ಖಲೀಫರಿಗೆ ಹಿರಿದಾದ ಪಾತ್ರವೇನೂ ಇರಲಿಲ್ಲ. ಬದಲಾಗಿ ಆಗಿನ ಆವೇಶ ಮತ್ತು ಧೈರ್ಯದ ಕಾರಣದಿಂದ ಈ ಎಲ್ಲ ವಿಜಯಗಳು ಆಗಿದ್ದುವು ಎಂದಾಗಿದೆ. ಈ ಸಾಮಾನ್ಯ ಅಭಿಪ್ರಾಯದ ಬಗ್ಗೆ ಅಲ್ಲಾಮ ಶಿಬ್‌ಲಿ ಬರೆಯುತ್ತಾರೆ: ನಮ್ಮ ಅಭಿಪ್ರಾಯದಲ್ಲಿ ಇದು ಸರಿಯಲ್ಲ. ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ಅಲಿಯವರ(ರ) ಕಾಲದಲ್ಲೂ ಸಹ ಅದೇ ಮುಸ್ಲಿಮರು ಇದ್ದರು. ಆದರೆ ಪರಿಣಾಮವೇನಾಯಿತು? ಆವೇಶ ಮತ್ತು ಪ್ರಭಾವ ನಿಸ್ಸಂಶಯವಾಗಿಯೂ ಮಿಂಚಿನಂತಹ ಶಕ್ತಿಗಳಾಗಿವೆ. ಆದರೆ ಈ ಸಾಮರ್ಥ್ಯಗಳನ್ನು ಉಪಯೋಗಿಸುವವನು ಸಹ ಅದೇ ಶಕ್ತಿ ಮತ್ತು ಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿಯಾಗಿದ್ದರೆ ಮಾತ್ರ ಅವುಗಳಿಂದ ಪ್ರಯೋಜನ ಲಭಿಸುವುದು. ಹೆಚ್ಚೇನೂ ಇದರ ಬಗ್ಗೆ ಆಲೋಚಿಸಿ ಕಂಡು ಹಿಡಿಯಬೇಕಾಗಿಲ್ಲ. ಆಗಿನ ಘಟನೆಗಳಿಂದಲೇ ನಾವು ಅದನ್ನು ತೀರ್ಮಾನಿಸಬಹುದಾಗಿದೆ. ವಿಜಯಗಳ ವಿಶದ ವಿವರಣೆಗಳನ್ನು ಓದುವಾಗ ಗೊತ್ತಾಗುವುದೇನೆಂದರೆ, ಸಂಪೂರ್ಣ ಸೈನ್ಯ ಒಂದು ಗೊಂಬೆಯ ಹಾಗೆಯ ಹಝ್ರತ್ ಉಮರರ(ರ) ಸೂಚನೆಗಳ ಪ್ರಕಾರ ಚಲಿಸುತ್ತಿತ್ತು. ಸೈನ್ಯದ ಕ್ರಮೀಕರಣ, ಸೈನ್ಯದ ತರಬೇತಿ, ಸೈನಿಕ ನಿವಾಸಗಳ ನಿರ್ಮಾಣ, ಕುದುರೆಗಳ ಪರಿಪಾಲನೆ, ಕೋಟೆಗಳ ಸಂರಕ್ಷಣೆ, ಹವಾಮಾನದ ಅನುಸಾರ ಸೈನಿಕರನ್ನು ಸ್ಥಳಾಂತರಗೊಳಿಸುವುದು, ಪತ್ರ ವ್ಯವಹಾರದ ವ್ಯವಸ್ಥೆ, ಸೇನಾಧಿಪತಿಗಳ ಆಯ್ಕೆ, ಕೋಟೆಗಳನ್ನು ಬೀಳಿಸಲು ಬೇಕಾದ ಆಯುಧಗಳ ಆಯ್ಕೆ ಮತ್ತು ಅನೇಕ ವಿಧಗಳ ಕಾರ್ಯಗಳನ್ನು ಹಝ್ರತ್ ಉಮರ್(ರ) ಸ್ವತಃ ಶುರುಮಾಡಿದರು ಮತ್ತು ಶಕ್ತವಾಗಿ ಅದನ್ನು ನೆಲೆನಿಲ್ಲಿಸಿದರು. ಇರಾಕಿನ ವಿಜಯಗಳಲ್ಲಿ ಹಝ್ರತ್ ಉಮರ್(ರ) ಸ್ವತಃ ಸೇನಾಧಿಪತಿಯ ಕೆಲಸ ಮಾಡುತ್ತಿದ್ದರು. ಸೈನ್ಯ ಮದೀನದಿಂದ ರವಾನೆಯಾಗುವಾಗ, ಹೋಗಬೇಕಾದ ಪ್ರತಿಯೊಂದು ರಸ್ತೆಯನ್ನು ಅವರು ಸ್ವತಃ ಹೇಳಿಕೊಟ್ಟಿದ್ದರು. ಅದರ ಪ್ರಕಾರ ಲಿಖಿತ ಆದೇಶಗಳನ್ನು ಕಳುಹಿಸುತ್ತಿದ್ದರು. ಸೈನ್ಯ ಖಾದಿಸಿಯಗೆ ತಲುಪಿದಾಗ ಅಲ್ಲಿಯ ನಖಾಶೆಯನ್ನು ತರಿಸಿದ ನಂತರ ಸೈನ್ಯದ ಕ್ರಮೀಕರಣ ಮತ್ತು ಪಂಕ್ತಿಗಳನ್ನು ಮಾಡುವುದರ ಬಗ್ಗೆ ನಿರ್ದೇಶನಗಳನ್ನು ಕೊಟ್ಟರು. ಅಧಿಕಾರಿಗಳನ್ನು ತನ್ನ ಆದೇಶಗಳ ಪ್ರಕಾರ ನಿಶ್ಚಯಿಸುತ್ತಿದ್ದರು. ಒಬ್ಬ ದೊಡ್ಡ ಸೇನಾಧಿಪತಿ ದೂರದಲ್ಲಿ ನಿಂತುಕೊಂಡು ಸಂಪೂರ್ಣ ಸೈನ್ಯವನ್ನು ನಡೆಸುತ್ತಿದ್ದಾರೆ ಎಂಬುದಾಗಿ ತಾರೀಖ್ ತಬರಿಯ ವಿಶದ ವಿವರಣೆಗಳಿಂದ ತಿಳಿದುಬರುತ್ತದೆ. ಎಲ್ಲವೂ ಹಝ್ರತ್ ಉಮರರ(ರ) ಸೂಚನೆ ಪ್ರಕಾರ ನಡೆಯುತ್ತಿತ್ತು. ಹತ್ತು ವರ್ಷಗಳಷ್ಟು ದೀರ್ಘ ಕಾಲಾವಧಿಯ ಈ ಯುದ್ಧಗಳಲ್ಲಿ ಎರಡು ಅತ್ಯಂತ ಅಪಾಯಕಾರಿ ಸಂದರ್ಭಗಳು ಬಂದಿದ್ದುವು. ಒಂದು ನಹಾವಂದಿನ ಯುದ್ಧದಲ್ಲಿ, ಮತ್ತೊಂದು ರೋಮಿನ ಅರಸನು ದ್ವೀಪವಾಸಿಗಳ ಸಹಾಯದೊಂದಿಗೆ ಪುನಃ ಹಿಮಸಿನ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲಿ. ಈ ಎರಡೂ ಯುದ್ಧಗಳಲ್ಲಿ ಎದ್ದಿದ್ದ ಬಿರುಗಾಳಿಯನ್ನು ಹಝ್ರತ್ ಉಮರ್(ರ) ಪ್ರಯೋಗಿಸಿದ ಉತ್ತಮ ಯುದ್ಧತಂತ್ರಗಳೇ ತಗ್ಗಿಸಿದ್ದುವು. ವಿಜಯಗಳು ಮತ್ತು ನ್ಯಾಯಪಾಲನೆ ಎರಡನ್ನೂ ಜೊತೆ ಜೊತೆಗೆ ಕೊಂಡು ನಡೆದ ಹಝ್ರತ್ ಉಮರ್‌ರಿಗೆ(ರ) ಸಮಾನವಾದ ಜಾಗತಿಕ ವಿಜಯಿ ಇಂದಿನ ತನಕ ಹುಟ್ಟಿಲ್ಲ. (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ–170–177,287, ದಾರುಲ್ ಇಶಾಅತ್ ಕರಾಚಿ 1991) (ಉರ್ದು ದಾಎರ ಮಾರಿಫ್ ಇಸ್ಲಾಮಿಯ, ಸಂಪುಟ–20, ಪುಟಗಳು–529–530, ಉರ್ದು ವಿಭಾಗ, ಪಂಜಾಬ್ ಯುನಿವರ್ಸಿಟಿ ಲಾಹೋರ್) (ಉರ್ದು ನಿಘಂಟು, ಸಂಪುಟ–19, ಪುಟ–932, ಉರ್ದು ಲುಗತ್ ಬೋರ್ಡ್ ಕರಾಚಿ) (ಮುಜಮುಲ್ ಬಲದಾನ್, ಸಂಪುಟ–1, ಪುಟ–249–250, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಉಮರ್‌ರ(ರ) ಪರವಾಗಿ ಹಝ್ರತ್ ಪೈಗಂಬರ್(ಸ) ಶಹಾದತಿನ ದುಆ ಮಾಡಿದ್ದಾಗಿಯೂ ಅವರನ್ನು ಶಹೀದ್ ಎಂದು ಕರೆದದ್ದಾಗಿಯೂ ವರದಿಯಿದೆ. ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ವರದಿ ಮಾಡುತ್ತಾರೆ: ಒಂದು ಬಾರಿ ಹಝ್ರತ್ ಉಮರ್(ರ) ಬಿಳಿ ವಸ್ತ್ರಗಳನ್ನು ಧರಿಸಿದ್ದಾಗಿ ಹಝ್ರತ್ ಪೈಗಂಬರ್(ಸ) ಕಂಡರು. ಇದು ಹೊಸ ಬಟ್ಟೆಯೋ ಅಥವಾ ಒಗೆದು ಶುಚಿ ಮಾಡಲಾದ ಬಟ್ಟೆಯೋ ಎಂದು ಹಝ್ರತ್ ಪೈಗಂಬರ್(ಸ) ಅವರೊಡನೆ ಕೇಳಿದರು. ಅದಕ್ಕೆ ಹಝ್ರತ್ ಉಮರ್(ರ) ಏನು ಉತ್ತರ ಕೊಟ್ಟರು ಎಂದು ನನಗೆ ನೆನಪಿಲ್ಲ ಎಂದು ಅಬ್ದುಲ್ಲಾಹ್ ಬಿನ್ ಉಮರ್(ರ) ಹೇಳುತ್ತಾರೆ. ಹಝ್ರತ್ ಉಮರ್(ರ) ಪರವಾಗಿ ದುಆ ಮಾಡುತ್ತಾ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದರು: ಹೊಸ ವಸ್ತ್ರಗಳನ್ನು ಧರಿಸು, ಶ್ಲಾಘನೀಯ ಜೀವಿತವನ್ನು ಸಾಗಿಸು ಮತ್ತು ಹುತಾತ್ಮರ ಮೃತ್ಯುವನ್ನು ಪಡೆಯು. ಅದರೊಂದಿಗೆ ಇಹಪರಲೋಕದಲ್ಲಿ ನಿನ್ನ ಕಣ್ಣುಗಳಿಗೆ ಅಲ್ಲಾಹನು ತಂಪನ್ನೀಯಲಿ ಎಂದೂ ಹೇಳಿದ್ದಾಗಿ ನನಗೆ ನೆನಪಿಗೆ ಬರುತ್ತಿದೆ. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಮುಸ್ನದ್ ಅಬ್ದುಲ್ಲಾ ಬಿನ್ ಉಮರ್ ಬಿನ್ ಉಮರ್ ಬಿನ್ ಖತ್ತಾಬ್, ಸಂಪುಟ–2, ಪುಟ–429, ಹದೀಸ್–5620, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1998)

ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ಅಬೂಬಕ್ರ್(ರ), ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್‌ರೊಂದಿಗೆ(ರ) ಹಝ್ರತ್ ಪೈಗಂಬರ್(ಸ) ಉಹದ್ ಪರ್ವತವನ್ನು ಏರಿದಾಗ ಅದು ಅಲುಗಾಡಲು ಶುರುವಾಯಿತು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಉಹದ್, ಕಂಪಿಸಬೇಡ, ನಿನ್ನ ಮೇಲೆ ಒಬ್ಬ ನಬಿ, ಒಬ್ಬ ಸಿದ್ದೀಖ್, ಇಬ್ಬರು ಶಹೀದರು ಇರುವರು.

(ಸಹೀಹ್ ಬುಖಾರಿ, ಕಿತಾಬ್ ಫಝಾಎಲುಸ್ಸಹಾಬ(ಸ) ಹದೀಸ್–3675)

ಹಝ್ರತ್ ಅಬೀ ಬಿನ್ ಕಅ್‌ಬ್ ವರದಿ ಮಾಡುತ್ತಾರೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಹಝ್ರತ್ ಉಮರರ(ರ) ಮರಣದಿಂದ ಇಸ್ಲಾಮಿಕ ಲೋಕ ಅಳುವುದು ಎಂದು ಹಝ್ರತ್ ಜಿಬ್ರೀಲ್(ಅ) ನನ್ನೊಡನೆ ಹೇಳಿರುವರು. (ಅಲ್‌ಮುಜಮುಲ್ ಕಬೀರ್ ಲಿತ್ತಿಬರಾನಿ, ಸಂಪುಟ–1, ಪುಟ–67–68, ವರದಿ ಸಂಖ್ಯೆ–61, ದಾರ್ ಅಹ್ಯಾಉತ್ತುರಾಸುಲ್ ಅರಬಿ 2002)

ಹಝ್ರತ್ ಉಮರ್‌ರಿಗೆ(ರ) ಇದ್ದ ಶಹಾದತಿನ ಬಯಕೆಯ ಬಗ್ಗೆ ಹೀಗೆ ವರದಿಯಾಗಿದೆ – ಉಮ್ಮುಲ್ ಮೂಅ್‌ಮಿನೀನ್ ಹಝ್ರತ್ ಹಫ್ಸ(ರ) ಹೇಳುತ್ತಾರೆ: ನನ್ನ ತಂದೆಯಾದ ಹಝ್ರತ್ ಉಮರ್(ರ) ಹೀಗೆ ದುಆ ಮಾಡುತ್ತಿದ್ದರು: **ಅಲ್ಲಾಹುಮ್ಮರ್‌ಝುಖ್‌ನಿ ಖತ್‌ಲನ್ ಫೀ ಸಬೀಲಿಕ ವವಫಾತನ್ ಫೀ ಬಲದಿ ನಬಿಯ್ಯಿಕ** ಅಂದರೆ **"**ಹೇ ಅಲ್ಲಾಹ್, ನಿನ್ನ ಮಾರ್ಗದಲ್ಲಿ ನನಗೆ ಶಹಾದತಿನ ಭಾಗ್ಯವನ್ನು ನೀಡು ಮತ್ತು ಹಝ್ರತ್ ಪೈಗಂಬರರ(ಸ) ಪಟ್ಟಣದಲ್ಲಿ ಮರಣವನ್ನು ನೀಡು.**"** ಇದು ಹೇಗೆ ಸಾಧ್ಯವೆಂದು ನಾನು ಕೇಳಿದೆ. ಹಝ್ರತ್ ಉಮರ್(ರ) ಹೇಳಿದರು: **ಇನ್ನಲ್ಲಾಹ ಯಅ್‌ತೀ ಬಿಅಮ್‌ರುಹು ಇನ್‌ಶಾ ಅಲ್ಲಾಹ್**. ಖಂಡಿತವಾಗಿಯೂ ಅಲ್ಲಾಹನು ತನ್ನ ಅನುಜ್ಞೆಯನ್ನು ಹೇಗೆ ಬೇಕಾದರೂ ನಡೆಸುವನು. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–252, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಉಮರ್(ರ) ಶಹಾದತಿನ ಬಗ್ಗೆ ಮಾಡಿದ ದುಆದ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ) ಅಲ್ಲಾಹನಿಗೆ ಎಷ್ಟು ನಿಕಟರಾಗಿದ್ದರು ಎಂದು ನೋಡಿರಿ. ಹಝ್ರತ್ ಪೈಗಂಬರ್(ಸ) ಹೇಳುತ್ತಾರೆ: ನನ್ನ ನಂತರ ಕೂಡಲೇ ಯಾರಾದರೂ ನಬಿಯಾಗಲಿಕ್ಕೆ ಇದ್ದರೆ ಉಮರ್ ಆಗುತ್ತಿದ್ದರು. ಆ ಕಾಲದಲ್ಲಿ ಒಬ್ಬ ನಬಿಯ ಆವಶ್ಯಕತೆಯಿದ್ದರೆ ಅದಕ್ಕೆ ಯೋಗ್ಯರಾದ ಹಝ್ರತ್ ಉಮರ್‌ರನ್ನು ಅಲ್ಲಾಹನು ಶಹಾದತಿನ ಪದವಿಯಿಂದ ಮೇಲಕ್ಕೆ ಎತ್ತಿ ನಬಿ ಎಂಬ ಪದವಿಗೆ ತಲುಪಿಸುತ್ತಿದ್ದನು. ಹಝ್ರತ್ ಉಮರ್‌ರ(ರ) ತ್ಯಾಗಗಳನ್ನು ನೋಡಿ ಯುರೋಪಿನ ಕಠಿಣ ವಿರೋಧಿಗಳು ಸಹ ಹೀಗೆ ಒಪ್ಪುತ್ತಾರೆ: ಈ ರೀತಿಯ ತ್ಯಾಗಗಳನ್ನು ಮಾಡುವ ಮತ್ತು ತನ್ನನ್ನು ಸಂಪೂರ್ಣವಾಗಿಯೂ ಸಮರ್ಪಿಸುವ ವ್ಯಕ್ತಿ ಬಹಳ ಕಡಿಮೆ. ಇಸ್ಲಾಮಿನ ವಿಜಯ ಅವರಿಂದಲೇ ಆಯಿತು ಎಂಬುದರ ಮಟ್ಟಿಗೆ ಅವರು ಹೇಳುತ್ತಾರೆ.

"ನನಗೆ ಮದೀನದಲ್ಲಿ ಶಹಾದತ್ ನೀಡು" ಎಂದು ಹಝ್ರತ್ ಉಮರ್(ರ) ದುಆ ಮಾಡುತ್ತಿದ್ದರು. ಹಝ್ರತ್ ಉಮರ್(ರ) ಈ ದುಆವನ್ನು ಪ್ರೀತಿಯ ಆವೇಶದಿಂದ ಮಾಡಿದ್ದರು. ಸತ್ಯದಲ್ಲಿ ಈ ದುಆ ಬಹಳ ಅಪಾಯಕಾರಿಯಾದುದಾತ್ತು. ಒಬ್ಬ ಪ್ರಬಲ ಶತ್ರು ಎಲ್ಲ ಇಸ್ಲಾಮಿಕ ದೇಶಗಳನ್ನು ಜಯಿಸುತ್ತಾ ಮದೀನವನ್ನು ಆಕ್ರಮಿಸಿ ಮದೀನದ ಗಲ್ಲಿಗಳಲ್ಲಿ ಹಝ್ರತ್ ಉಮರ್‌ರನ್ನುಪೂರ್ಣ ಶಹೀದ್ ಮಾಡಬೇಕು ಎಂಬುದು ಎಷ್ಟು ಅಪಾಯಕಾರಿಯಾದ ದುಆ ಆಗಿತ್ತು. ಆದರೆ ಅಲ್ಲಾಹನಿಗೆ ಹೃದಯಗಳ ಸ್ಥಿತಿ ಗೊತ್ತಿದೆ. ಅವನು ಹಝ್ರತ್ ಉಮರ್‌ರ(ರ) ಈ ಬಯಕೆಯನ್ನು ಸಹ ಈಡೇರಿಸಿದನು. ಆ ದುಆದಿಂದ ಉಂಟಾಗಬಹುದಾದ ಆಪತ್ತಿನಿಂದ ಮದೀನವನ್ನು ಸಹ ಅಲ್ಲಾಹನು ರಕ್ಷಿಸಿದನು. ಅದು ಹೇಗೆಂದರೆ, ಒಬ್ಬ ಕಾಫಿರಿನ ಕೈಗಳಿಂದಲೇ ಅವರು ಮದೀನದಲ್ಲಿ ಶಹೀದ್ ಆದರು. ಹಝ್ರತ್ ಉಮರ್‌ರ(ರ) ದುಆದಿಂದ ಗೊತ್ತಾಗುವುದೇನೆಂದರೆ, ತನ್ನ ಜೀವವನ್ನು ಅಲ್ಲಾಹನ ಮಾರ್ಗದಲ್ಲಿ ತ್ಯಾಗಮಾಡುವುದನ್ನು ಅಲ್ಲಾಹನ ಸಾಮೀಪ್ಯದ ಲಕ್ಷಣವೆಂದು ಹಝ್ರತ್ ಉಮರ್(ರ) ತಿಳಿಯುತ್ತಿದ್ದರು. ಆದರೆ ಇಂದು ಅಲ್ಲಾಹನು ಮನುಷ್ಯನ ಜೀವವನ್ನು ರಕ್ಷಿಸುವುದನ್ನು ಸಾಮೀಪ್ಯದ ಲಕ್ಷಣವೆಂದು ಜನರು ತಿಳಿದಿದ್ದಾರೆ. (ಖುತ್‌ಬಾತೆ ಮಹ್ಮೂದ್, ಸಂಪುಟ–17, ಪುಟ–474–475)

ಇನ್ನೊಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮದೀನದಲ್ಲಿ ಶಹಾದತಿನ ಮರಣ ಉಂಟಾಗಬೇಕು ಎಂದು ಹಝ್ರತ್ ಉಮರ್(ರ) ಸದಾ ದುಆ ಮಾಡುತ್ತಿದ್ದರು ಎಂದು ಬರೆಯಲಾಗಿದೆ.

ನೋಡಿರಿ, ಮರಣ ಎಷ್ಟು ಭಯಾನಕವಾದ ಸಂಗತಿಯಾಗಿದೆ. ಮರಣದ ಸಮಯದಲ್ಲಿ ನಿಕಟ ಸಂಬಂಧಿಕರೂ ದೂರವಾಗುತ್ತಾರೆ. ಜನರು ಮರಣಕ್ಕೆ ಎಷ್ಟು ಹೆದರುತ್ತಾರೆ ಎಂಬುದರ ಬಗ್ಗೆ ಒಂದು ಕಥೆಯಿದೆ. ಒಬ್ಬ ಮಹಿಳೆಯ ಮಗಳು ರೋಗಿಯಾದಳು. ಅವಳು ಹೀಗೆ ದುಆ ಮಾಡುತ್ತಿದ್ದಳು. ಹೇ ದೇವಾ, ನನ್ನ ಮಗಳು ರಕ್ಷಣೆ ಪಡೆಯಲಿ, ಆ ಸ್ಥಾನದಲ್ಲಿ ನನಗೆ ಮೃತ್ಯು ಬರಲಿ. ಮಗಳೊಂದಿಗೆ ತನಗಿದ್ದ ಪ್ರೀತಿಯನ್ನು ಅವಳು ವ್ಯಕ್ತಪಡಿಸುತ್ತಿದ್ದಳು. ಒಂದು ರಾತ್ರಿ ಆಕಸ್ಮಿಕವಾಗಿ ಆ ಮಹಿಳೆಯ ದನಕ್ಕೆ ಕಟ್ಟಲಾದ ಹಗ್ಗ ಮುರಿದುಹೋಯಿತು. ದನವು ಒಂದು ಪಾತ್ರೆಗೆ ಬಾಯಿ ಹಾಕಿತು. ಅದರಲ್ಲಿ ಅದರ ತಲೆ ಸಿಲುಕಿತು. ಹೆದರಿಕೆಯಿಂದ ಅದು ಆಚೆ ಈಚೆ ಓಡಲು ಶುರುಮಾಡಿತು. ದನದ ಶರೀರದಲ್ಲಿ ತಲೆಯ ಬದಲಾಗಿ ಬೇರೊಂದು ದೊಡ್ಡ ವಸ್ತುವನ್ನು ಕಂಡು ಆ ಮಹಿಳೆ ಹೆದರಿದಳು. ನನ್ನ ದುಆ ಸ್ವೀಕಾರವಾಯಿತು ಎಂದು ಅವಳಿಗೆ ಅನಿಸಿತು. ಅಝ್ರಾಯೀಲ್ ನನ್ನ ಜೀವ ತೆಗೆಯಲು ಬಂದಿರುವರು ಎಂದು ಅವಳು ಭಾವಿಸಿದಳು. ಆಗ ಅವಳು ಅನಿಯಂತ್ರಿತವಾಗಿ ಹೀಗೆ ಹೇಳಿದಳು: ಹೇ ಅಝ್ರಾಈಲ್, ರೋಗಿ ನಾನಲ್ಲ, ಬದಲಾಗಿ ನನ್ನ ಮಗಳು. ಅವಳ ಜೀವವನ್ನು ತೆಗಿ. ಹೀಗೆ ಮಗಳ ಕಡೆಗೆ ಬೊಟ್ಟು ಮಾಡಿದಳು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಜೀವ ಬಹಳ ಪ್ರಿಯವಾದ ಸಂಗತಿಯಾಗಿದೆ. ಅದನ್ನು ರಕ್ಷಿಸಲು ಮನುಷ್ಯನು ಎಲ್ಲ ರೀತಿಯಲ್ಲೂ ಪ್ರಯತ್ನಿಸುತ್ತಾನೆ. ಜೀವ ತೆಗಿ ಎಂದು ಅವಳು ದುಆ ಮಾಡುತ್ತಿದ್ದಳು. ಆದರೆ ಹಾಗೆಯೇ ಆಗುವ ಅಪಾಯ ಉಂಟಾದಾಗ ಮಗಳ ಕಡೆಗೆ ಬೊಟ್ಟು ಮಾಡಿದಳು. ಮನುಷ್ಯನು ತನ್ನ ಜೀವವನ್ನು ರಕ್ಷಿಸಲು ಚಿಕಿತ್ಸೆ ನಡೆಸಿ ಕಂಗಾಲಾಗುತ್ತಾನೆ. ಆದರೆ ಸಹಾಬರಿಗೆ ಆ ಜೀವವನ್ನು ಅಲ್ಲಾಹನಿಗೆ ಸಮರ್ಪಿಸಲು ಎಷ್ಟು ಬಯಕೆಯಿತ್ತು ಎಂದರೆ, ನನಗೆ ಮದೀನದಲ್ಲಿ ಶಹಾದತ್ ನೀಡು ಎಂದು ಹಝ್ರತ್ ಉಮರ್(ರ) ದುಆ ಮಾಡುತ್ತಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್‌ರ(ರ) ಈ ದುಆ ಎಷ್ಟು ಅಪಾಯಕಾರಿಯಾಗಿತ್ತು ಎಂದು ನನಗೆ ಅನಿಸುತ್ತಿತ್ತು. ಶತ್ರುಗಳು ಮದೀನವನ್ನು ಆಕ್ರಮಿಸಿ ಮದೀನದ ಗಲ್ಲಿಗಳಲ್ಲಿ ಹಝ್ರತ್ ಉಮರ್‌ರನ್ನು ಶಹೀದ್ ಮಾಡಬೇಕು ಎಂದಾಗಿತ್ತು ಅದರ ಅರ್ಥ. ಆದರೆ ಅಲ್ಲಾಹನು ಆ ದುಆವನ್ನು ಬೇರೊಂದು ರೀತಿಯಲ್ಲಿ ಸ್ವೀಕರಿಸಿದನು. ಮುಸ್ಲಿಮನೆಂದು ಕರೆಯಲ್ಪಡುವ ವ್ಯಕ್ತಿಯ ಕೈಯಿಂದಲೇ ಅವರನ್ನು ಮದೀನದಲ್ಲಿ ಶಹೀದ್ ಮಾಡಿಸಿದನು. ಶಹೀದ್ ಮಾಡಿದವನು ಕಾಫಿರ್ ಆಗಿದ್ದನು ಎಂದು ಹೇಳಲಾಗುತ್ತದೆ. ಆದರೆ ಕೆಲವೆಡೆ ಬಹುಶಃ ಮುಸ್ಲಿಮನಾಗಿದ್ದನು ಎಂಬ ರೀತಿಯ ವರದಿಗಳು ಸಹ ಇವೆ. ಸಾಮಾನ್ಯವಾಗಿ ಅವನು ಕಾಫಿರ್ ಆಗಿದ್ದನು ಎಂದೇ ಹೇಳಲಾಗುತ್ತದೆ. ಮುಸ್ಲಿಹ್ ಮೌಊದ್(ರ) ಸಹ ಒಂದೆಡೆ ಕಾಫಿರ್ ಎಂದೂ ಮತ್ತೊಂದೆಡೆ ಮುಸ್ಲಿಮ್ ಎಂದು ಹೇಳಿರುವರು. ಅವರಿಗೂ ಅದರ ಬಗ್ಗೆ ಖಾತರಿಯಿರಲಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಸ್ವತಃ ಹೇಳುತ್ತಾರೆ: ಕೆಲವರ ಪ್ರಕಾರ ಅವನು ಮುಸ್ಲಿಮನಾಗಿರಲಿಲ್ಲ. ಹೇಗಿದ್ದರೂ ಒಬ್ಬ ಗುಲಾಮನಾಗಿದ್ದನು. ಅವನ ಕೈಯಿಂದ ಅಲ್ಲಾಹನು ಹಝ್ರತ್ ಉಮರ್‌ರನ್ನು(ರ) ಶಹೀದ್ ಮಾಡಿಸಿದನು. ಮನುಷ್ಯನು ಸ್ವತಃ ಬಯಸುವ ಸಂಗತಿ ಅವನಿಗೆ ಆಪತ್ತಾಗಿರುವುದಿಲ್ಲ. (ಖುತ್‌ಬಾತೆ ಮಹ್ಮೂದ್, ಸಂಪುಟ–1, ಪುಟ–166–167)

ಹಝ್ರತ್ ಮುಸ್ಲಿಹ್ ಮೌಊದ್(ರ)ರವರು ಈ ಘಟನೆಯನ್ನು ತಮ್ಮ ಒಂದು ಖುತ್‌ಬ ಜುಮುಅದಲ್ಲಿ ಹೀಗೆ ವಿವರಿಸಿದ್ದಾರೆ:

ಹಝ್ರತ್ ಉಮರರ(ರ) ಶಹಾದತ್ ಮತ್ತು ನಿಧನದ ಕುರಿತು ಸಹಾಬಿವರ್ಯರು ಕಂಡಿದ್ದ ಕನಸುಗಳು. ಹಝ್ರತ್ ಅಬೂದರ್‌ದ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಔಫ್ ಬಿನ್ ಮಾಲಿಕ್(ರ) ಒಂದು ಕನಸನ್ನು ಕಂಡಿದ್ದರು. ಒಂದು ಮೈದಾನದಲ್ಲಿ ಜನರು ಒಟ್ಟು ಸೇರಿದ್ದರು. ಅವರಲ್ಲಿ ಒಬ್ಬ ವ್ಯಕ್ತಿ ಇತರ ಜನರಿಗಿಂತ ಮೂರು ಅಡಿ ಮೇಲೆ ಇದ್ದರು. ಇದು ಯಾರೆಂದು ನಾನು ಕೇಳಿದೆ. ಇದು ಉಮರ್ ಬಿನ್ ಖತ್ತಾಬ್ ಆಗಿರುವರು ಎಂದು ಹೇಳಲಾಯಿತು. ಅವರು ಇತರರಿಗಿಂತ ಏಕೆ ಮೇಲೆ ಇದ್ದಾರೆ ಎಂದು ಕೇಳಿದೆ. ಹೀಗೆ ಹೇಳಲಾಯಿತು: ಅವರಲ್ಲಿ ಮೂರು ಗುಣಗಳಿವೆ. ಅವರು ಅಲ್ಲಾಹನ ವಿಷಯದಲ್ಲಿ ಯಾವನೇ ದೂಷಿಸುವವನ ದೂಷಣೆಗೆ ಹೆದರಲಾರರು. ಎರಡು, ಅವರು ಅಲ್ಲಾಹನ ಮಾರ್ಗದಲ್ಲಿ ಶಹೀದ್ ಆಗುವರು. ಮೂರು ಅವರು ಖಲೀಫರಾಗುವರು. ಆಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ತನ್ನ ಕನಸನ್ನು ಹೇಳಲು ಹಜ್‌ರತ್ ಅಬೂಬಕರ್(ರ)ರವರ ಬಳಿಗೆ ಬಂದರು. ಹಝ್ರತ್ ಅಬೂಬಕರ್(ರ) ಆಗ ಖಲೀಫರಾಗಿದ್ದರು. ಇದನ್ನು ಅವರಿಗೆ ತಿಳಿಸಿದಾಗ, ಹಝ್ರತ್ ಅಬೂಬಕರ್(ರ) ಅವರು ಹಝ್ರತ್ ಉಮರ್(ರ) ಅವರನ್ನು ಕರೆದು ಅವರಿಗೆ ಸಂತೋಷದ ಸುದ್ದಿಯನ್ನು ನೀಡಿದರು ಮತ್ತು ಹಝ್ರತ್ ಔಫ್(ರ) ಅವರಿಗೆ ತಮ್ಮ ಕನಸನ್ನು ವಿವರಿಸಲು ಹೇಳಿದರು. ವರದಿಗಾರರು ಹೇಳುತ್ತಾರೆ ಅವರು ಹಝ್ರತ್ ಉಮರ್(ರ)ರವರು ಖಲೀಫನನ್ನಾಗಿ ಮಾಡುವುದಾಗಿ ಹೇಳಿದಾಗ ಹಝ್ರತ್ ಉಮರ್(ರ) ಅವರನ್ನು ಛೀಮಾರಿ ಹಾಕಿ ಮೌನಗೊಳಿಸಿದರು ಏಕೆಂದರೆ ಇದು ಹಜರತ್ ಅಬೂಬಕರ್(ರ) ಅವರ ಜೀವನದ ಘಟನೆಯಾಗಿದೆ. ನಂತರ ಹಝ್ರತ್ ಉಮರ್(ರ) ಖಲೀಫರಾದಾಗ ಅವರು ಸಿರಿಯಾಕ್ಕೆ ಹೋದರು. ಅಲ್ಲಿ ಅವರು ಹಝ್ರತ್ ಔಫ್(ರ) ಅವರನ್ನು ನೋಡಿದರು. ಹಝ್ರತ್ ಉಮರ್(ರ)ರವರು ಅವರನ್ನು ಕರೆದು ಧರ್ಮಪೀಠಕ್ಕೆ ಕರೆದೊಯ್ದು ಅವರ ಕನಸನ್ನು ಹೇಳಲು ಹೇಳಿದರು. ಆಗ ಅವರು ತಮ್ಮ ಕನಸನ್ನು ಹೇಳಿದರು. ಹಝ್ರತ್ ಉಮರ್(ರ) ಉತ್ತರಿಸಿದರು: ಅಲ್ಲಾಹನ ವಿಷಯದಲ್ಲಿ ಯಾವುದೇ ದೋಷಿಸುವವನ ದೋಷಣೆಗೆ ನಾನು ಹೆದರುವುದಿಲ್ಲ, ಅಲ್ಲಾಹನು ನನ್ನನ್ನು ಅವರಲ್ಲಿ ಒಬ್ಬನನ್ನಾಗಿ ಮಾಡಲಿ ಎಂದು ನಾನು ಭಾವಿಸುತ್ತೇನೆ ಮತ್ತು ನನ್ನನ್ನು ಖಲೀಫನನ್ನಾಗಿ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ನಾನು ಖಲೀಫನಾಗಿ ನೇಮಕಗೊಂಡಿದ್ದೇನೆ. ಮತ್ತು ಅವನು ನನಗೆ ವಹಿಸಿಕೊಟ್ಟಿದ್ದಕ್ಕೆ ಸಹಾಯ ಮಾಡುವಂತೆ ನಾನು ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇನೆ ಮತ್ತು ಹುತಾತ್ಮನಾಗುವೆನು ಎಂಬುದರ ಬಗ್ಗೆ ನಾನು ಹೇಗೆ ಹುತಾತ್ಮನಾಗಬಹುದು!! ನಾನು ಅರೇಬಿಯದಲ್ಲಿ ವಾಸಿಸುತ್ತಿದ್ದೇನೆ ಮತ್ತು ನನ್ನ ಸುತ್ತಲಿನ ಜನರೊಂದಿಗೆ ಹೋರಾಡುವುದಿಲ್ಲ. ಆಗ ಅವರು ಹೇಳಿದರು: ಅಲ್ಲಾಹನು ಬಯಸಿದರೆ, ಅವನು ಈ ಸಾಕ್ಷ್ಯವನ್ನು ತರುತ್ತಾನೆ. ಅಂದರೆ, ಯಾವುದೇ ಸ್ಪಷ್ಟವಾದ ಸಂದರ್ಭಗಳಿಲ್ಲದಿದ್ದರೂ, ಅಲ್ಲಾಹನು ತಾನು ಬಯಸಿದ್ದನ್ನು ಈಡೇರಿಸಬಹುದು.

ಹಝ್ರತ್ ಅನಸ್ ಬಿನ್ ಮಾಲಿಕ್(ರ)ರವರು ವರದಿ ಮಾಡುತ್ತಾರೆ ಹಝ್ರತ್ ಅಬು ಮೂಸಾ ಅಲ್–ಅಶ್'ಅರಿ(ರ) ಅವರು ಹೇಳುತ್ತಾರೆ: ನಾನು ಕನಸಿನಲ್ಲಿ ಅನೇಕ ಮಾರ್ಗಗಳನ್ನು ಅನುಸರಿಸಿದ್ದೇನೆ ಎಂದು ಕಂಡಿದ್ದೇನೆ ತದನಂತರ ಅವೆಲ್ಲ ಮಾರ್ಗಗಳು ಕಣ್ಮರೆಯಾದವು. ಕೇವಲ ಒಂದೇ ಒಂದು ದಾರಿ ಉಳಿದಿದೆ ಮತ್ತು ನಾನು ಪರ್ವತವನ್ನು ತಲುಪುವವರೆಗೆ ನಾನು ಅದರ ಮೇಲೆ ನಡೆದಿದ್ದೇನೆ ಅಲ್ಲಿ ನಾನು ಪ್ರವಾದಿ ಮುಹಮ್ಮದ್(ಸ) ಅವರನ್ನು ಅದರ ಮೇಲೆ ಇರುವುದನ್ನು ನೋಡಿದೆ ಮತ್ತು ಹಝ್ರತ್ ಅಬು ಬಕರ್(ರ) ನಿಮ್ಮ ಪಕ್ಕದಲ್ಲಿದ್ದರು ಮತ್ತು ನೀವು ಹಝ್ರತ್ ಉಮರ್(ರ)ರವರನ್ನು ಸನ್ನೆಯಿಂದ ಕರೆದರು ಅವರು ಬಂದಾಗ ನಾನು **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಹೇಳಿದೆ. ಅಲ್ಲಾಹನ ಆಣೆ! ಅಮೀರ್ ಅಲ್–ಮುಮಿನೀನ್ ಅವರು ನಿಧನರಾದರು. ಹಝ್ರತ್ ಅನಸ್(ರ) ಹೇಳುತ್ತಾರೆ, ನಾನು ಹೇಳಿದೆ (ಅವರು ತಮ್ಮ ಮನಸ್ಸಿನಲ್ಲಿ ಹೀಗೆ ಹೇಳುತ್ತಾರೆ) ನೀವು ಈ ಕನಸನ್ನು ಹಝ್ರತ್ ಉಮರ್(ರ) ಅವರಿಗೆ ಬರೆಯುವುದಿಲ್ಲ ಎಂದು. ಅವರು ಹೇಳಿದರು, "ನಾನು ಹಝ್ರತ್ ಉಮರ್(ರ) ಅವರ ಸಾವಿನ ಬಗ್ಗೆ ತಿಳಿಸಲು ಬಯಸುವುದಿಲ್ಲ." (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–3, ಪುಟಗಳು 252–253, ದಾರುಲ್ ಕುತುಬ್ ಅಲ್–ಇಲ್‌ಮಿಯಾ ಬೈರುತ್ ಲೆಬನಾನ್ 1990)

ಶುಕ್ರವಾರದಂದು ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರು ಜನರನ್ನು ಉದ್ದೇಶಿಸಿ ಮಾತನಾಡಿದರು ಎಂದು ಸಯೀದ್ ಬಿನ್ ಅಬು ಹಿಲಾಲ್ ಅವರಿಂದ ವರದಿಯಾಗಿದೆ. ಅವರು ಹೇಳಿದರು: ಓ ಜನರೇ! ನನ್ನ ಮರಣದ ಸಮಯ ಹತ್ತಿರದಲ್ಲಿದೆ ಎಂದು ನನಗೆ ಒಂದು ಕನಸನ್ನು ತೋರಿಸಲಾಗಿದೆ. ನನ್ನನ್ನು ಎರಡು ಬಾರಿ ಕಚ್ಚಿದ ಕೆಂಪು ಹುಂಜವನ್ನು ನಾನು ನೋಡಿದೆ. ಹಾಗಾಗಿ ನಾನು ಈ ದೃಷ್ಟಿಯನ್ನು ಅಸ್ಮಾ ಬಿಂತ್ ಉಮೈಸ್‌ಗೆ ಹೇಳಿದಾಗ, ಅರಬ್ಬರಲ್ಲದವರಲ್ಲಿ ಒಬ್ಬನು ನನ್ನನ್ನು ಕೊಲ್ಲುತ್ತಾನೆ ಎಂಬ ವ್ಯಾಖ್ಯಾನವನ್ನು ಅವರು ಹೇಳಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-255, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಉಮರ್(ರ)ರವರ ಶಹಾದತ್ತಿನ ಘಟನೆಯ ಕುರಿತು ಅವರು ಯಾವಾಗ ಶಹೀದ್ ಆದರು? ಅವರಿಗೆ ಯಾವಾಗ ದಫನ್ ಮಾಡಲಾಯಿತು? ಎಂಬುದರ ಬಗ್ಗೆ ವಿಭಿನ್ನ ವರದಿಗಳಿವೆ.

ತಬಖಾತುಲ್ ಕುಬ್ರ ಎಂಬ ಚರಿತ್ರೆಯ ಗಥದಲ್ಲಿ ಹಝ್ರತ್ ಉಮರ್(ರ) ಅವರ ಮೇಲೆ ಬುಧವಾರ ದಿವಸ ಹಲ್ಲೆ ನಡೆಯಿತು ಮತ್ತು ಗುರುವಾರ ದಿವಸ ಅವರು ನಿಧನ ಹೊಂದಿದರು ಎಂದು ಬರೆಯಲಾಗಿದೆ. ಹಿಜರೀ 26, ಧುಲ್‌ಹಜ್ಜ 23ರಂದು ಹಝ್ರತ್ ಉಮರರ(ರ) ಮೇಲೆ ಹಲ್ಲೆ ನಡೆಸಿ ಗಾಯಗೊಳಿಸಲಾಗಿತ್ತು. ಹಿಜರೀ 24, ಮುಹರ್ರಂ ಒಂದರಂದು ಅವರು ಶಹೀದ್ ಆದರು. ಅದೇ ದಿನದಂದು ಅವರನ್ನು ದಫನ್ ಮಾಡಲಾಯಿತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-278, 23 ಹಿಜರಿ ದಾರುಲ್ ಕುತುಬ್ ಇಲ್‌ಮಿಯ 1990) (ಅಲ್‌ಬಿದಾಯ ವನ್ನಹಾಯ ಲಿಇಬ್ನೆ ಕಸೀರ್, ಸಂಪುಟ-4, ಪುಟ-134, 1997)

ಸಾಹಿಹ್ ಬುಖಾರಿಯಲ್ಲಿ ಶಹಾದತ್ತಿನ ಘಟನೆಯ ವಿವರಗಳು ಈ ಕೆಳಗಿನಂತಿವೆ. ಅಮ್ರ್ ಇಬ್ನ್ ಮೈಮೂರ್ ಅವರು ಹೇಳುತ್ತಾರೆ: ನಾನು ಹಝ್ರತ್ ಉಮರ್ ಇಬ್ನ್ ಅಲ್-ಖತ್ತಾಬ್(ರ) ಅವರು ಗಾಯಗೊಂಡಿರುವ ಕೆಲವು ದಿನಗಳ ಮೊದಲು ನಾನು ಮದೀನಾದಲ್ಲಿ ನೋಡಿದ್ದೇನೆ. ಅವರು ಹುದೈಫಾ ಇಬ್ನ್ ಯಮಾನ್ ಮತ್ತು ಉಸ್ಮಾನ್ ಇಬ್ನ್ ಹನೀಫ್ ಅವರ ಬಳಿ ತಂಗಿ ಹೇಳಿದರು, ಖಿಲಾಫತ್ ವತಿಯಿಂದ ಇರಾಖ್‌ನ ಭೂಮಿಗಳನ್ನು ನೋಡಿಕೊಳ್ಳುವ ಜವಾಬ್ದಾರಿನಿಮ್ಮಿಬ್ಬರಿಗೆ ನೀಡಲಾಗಿತ್ತು ನೀವಿಬ್ಬರೂ ಏನು ಮಾಡಿದ್ದೀರಿ? ನೀವಿಬ್ಬರೂ ಭೂಮಿಯ ಮೇಲೆ ತನ್ನ ಶಕ್ತಿಗೆ ಮೀರಿದ ತೆರಿಗೆಯನ್ನು ವಿಧಿಸಿದ್ದೀರಿ ಎಂದು ನೀವು ಭಯಪಡುವುದಿಲ್ಲವೇ? ಅವರಿಬ್ಬರೂ, "ಅವರು ಕೊಡಬಹುದಾದ ತೆರಿಗೆಯನ್ನು ನಾವು ನಿಗದಿಪಡಿಸಿದ್ದೇವೆ" ಎಂದು ಹೇಳಿದರು. ಅಂದರೆ ಭೂಮಿಗೆ ಇಳ್ಟು ಬೆಳೆಗಳನ್ನು ಉತ್ಪಾದಿಸುವಳ್ಟು ಸಾಮರ್ಥ್ಯವಿದೆ. ದುರುಪಯೋಗ ಆಗಿಲ್ಲ. ಹಝ್ರತ್ ಉಮರ್(ರ) ಹೇಳಿದರು: ಹಾಗಾದರೆ ನೀವು ಭೂಮಿಯ ಮೇಲೆ ಅವಳಿಗೆ ಶಕ್ತಿಯಿಲ್ಲದ ತೆರಿಗೆಯನ್ನು ಹಾಕಿಲ್ಲ ಎಂದು ನೋಡಿಕೊಳ್ಳಿ? ಅವರಿಬ್ಬರೂ ಇಲ್ಲ ಎಂದು ಹೇಳಿದರು ಎಂದು ವರದಿಗಾರರು ಹೇಳುತ್ತಾರೆ: ಅಲ್ಲಾಹನು ನನ್ನನ್ನು ಸುರಕ್ಷಿತವಾಗಿರಿಸಿದರೆ, ನಾನು ಇರಾಖ್‌ನ ಜನರ ವಿಧವೆಯರನ್ನು ನನ್ನ ಬಳಿಕೆ ಅವರಿಗೆ ಯವ ವ್ಯಕ್ತಿಯ ಆಸರಯು ಬೇಕಾಗಿರಬಾರದು ಅಂತಹ ಸ್ಥಿತಿಯಲ್ಲಿ ಬಿಡುತ್ತೇನೆ, ಎಂದು ಹಝ್ರತ್ ಉಮರ್(ರ) ಹೇಳಿದರು. ಈ ಸಂಭಾಷಣೆಯ ನಂತರ ನಾಲ್ಕನೇ ರಾತ್ರಿಯ ಮುಂಜೆಯೆ ಹಝ್ರತ್ ಉಮರ್(ರ) ಗಾಯಗೊಂಡರು ಎಂದು ನಿರೂಪಕರು ಹೇಳಿದರು. "ಅವರು ಗಾಯಗೊಂಡ ದಿನ ನಾನು ಅಲ್ಲಿಯೇ ನಿಂತಿದ್ದೆ" ಎಂದು ನಿರೂಪಕ ಹೇಳಿದರು. ಅವರ ಮತ್ತು ನನ್ನ ನಡುವೆ ಹಝ್ರತ್ ಅಬ್ದುಲ್ಲಾ ಬಿನ್ ಅಬ್ಬಾಸ್(ರ) ಹೊರತುಪಡಿಸಿ ಯಾರೂ ಇರಲಿಲ್ಲ ಮತ್ತು ಅವರು ಎರಡು ಪಂಕ್ತಿಗಳ ನಡುವೆ ಹಾದುಹೋದಾಗ ಸಾಲುಗಳನ್ನು ನೇರಗೊಳಿಸಲು ಹೇಳುತ್ತಿದ್ದರು. ಅವರಲ್ಲಿ ಯಾವುದೇ ಗೊಂದಲವಿಲ್ಲ ಎಂದು ಅವರು ನೋಡಿದಾಗಲೂ ಅವರು ಮುಂದೆ ಹೋಗಿ ಅಲ್ಲಾಹು ಅಕ್ಬರ್ ಎಂದು ಹೇಳುತ್ತಿದ್ದರು ಮತ್ತು ಕೆಲವೊಮ್ಮೆ ಫಜ್ರ್ ನಮಾಝಿನಲ್ಲಿ ಅವರು ಸೂರಾ ಯೂಸುಫ್ ಅಥವಾ ಸೂರಾ ಆನ್-ನಹ್ಲ್ ಅಥವಾ ಅಂತಹುದೇ ಸೂರಾವನ್ನು ಮೊದಲ ರಕಅತ್‌ನಲ್ಲಿ ಪಠಿಸುತ್ತಿದ್ದರು, ಇದರಿಂದ ಹೆಚ್ಚು ಜನರು ಬಂದು ಸೇರುತ್ತಿದ್ದರು. ಅವರು ಅಲ್ಲಾಹು ಅಕ್‌ಬರ್ ಎಂದು ಹೇಳಿದ ತಕ್ಷಣ ಅವನು ನನ್ನನ್ನು ಕೊಂದಿದ್ದಾನೆ ಅಥವಾ ನಾಯಿ ಕಚ್ಚಿದೆ ಎಂದು ಹೇಳುವುದನ್ನು ಕೇಳಿದೆವು. ಅಕ್ರಮಣಗಾರನು ಹಝ್ರತ್ ಉಮರ್(ರ)ರವರ ಮೇಲೆ ಹಲ್ಲೆ ನಡೆಸಿದಾಗ ಆ ಅರಬೇತರನು ಎರಡು ಅಲುಗಿನ ಚಾಕುವಿನಿಂದ ಓಡಿಹೋದನು. ಅವನನ್ನು ಯಾರು ಹಿಡಿಯಲು ಪ್ರಯತ್ನಿಸಿದಾಗ ಆತನು ಅವರನ್ನು ಸಹ ಗಾಯಗೊಳಿಸುತ್ತ ಹೋಗುತ್ತಿದ್ದನು. ಅವನು ಹದಿಮೂರು ಜನರನ್ನು ಗಾಯಗೊಳಿಸುವವರೆಗೂ ಗಾಯಗೊಳಿಸುತ್ತಲೇ ಇದ್ದನು. ಅವರಲ್ಲಿ ಏಳು ಮಂದಿ ಸಾವನ್ನಪ್ಪಿದರು.

ಇದನ್ನು ನೋಡಿದ ಮುಸಲ್ಮಾನರೊಬ್ಬರು ಕೋಟನ್ನು ಬುಖಾರಿನಲ್ಲಿ ಬುರ್ನಸ್ ಎಂಬ ಪದವನ್ನು ಉಪಯೋಗಿಸಲಾಗಿದೆ, ಇದರರ್ಥ ತಲೆಯ ಮುಚ್ಚಳವನ್ನು ಜೋಡಿಸಲಾದ ಬಟ್ಟೆ. ಉದ್ದನೆಯ ನಿಲುವಂಗಿಯ ಜೊತೆಗೆ ತಲೆಯ ಹೊದಿಕೆಯೂ ಇರುತ್ತದೆ. ಉದ್ದನೆಯ ಟೋಪಿ ಎಂದೂ ಸಹ ಕರೆಯುತ್ತಾರೆ. ಹೇಗಾದರೂ, ಆ ಮುಸ್ಲಿಮನು ಆತನ ಮೇಲೆ ಕೋಟನ್ನು ಎಸೆದನು. ಸಿಕ್ಕಿಬಿದ್ದಿದ್ದು ಗೊತ್ತಾದಾಗ ಕತ್ತು ಕೊಯ್ದುಕೊಂಡನು. ಮತ್ತು ಹಝ್ರತ್ ಉಮರ್(ರ) ಅಬ್ದುಲ್-ರಹಮಾನ್ ಇಬ್ನ್ ಔಫ್ನ(ರ) ಅವರ ಕೈಯನ್ನು ಹಿಡಿದು ಅವರನ್ನು ಮುಂದಕ್ಕೆ ಕರೆದೊಯ್ದರು. ಅವರು ಹಝ್ರತ್ ಉಮರ್(ರ) ಅವರ ಧ್ವನಿ ಕಾಣೆಯಾಗಿದೆ ಮತ್ತು ಸುಬ್‌ಹಾನಲ್ಲಾಹ್! ಸುಬ್‌ಹಾನಲ್ಲಾಹ್! ಎಂದು ಅವರು ಹೇಳಿದರು, ಅಬ್ದ್ ಅಲ್-ರಹಮಾನ್ ಇಬ್ನ್ ಔಫ್(ರ) ನಮಾಝನ್ನು ಬಹಳ ಸಣ್ಣದಾಗಿ ಜನರನ್ನು ಮುನ್ನಡೆಸಿದರು. ನಂತರ ಅವರು ಪ್ರಾರ್ಥನೆಯನ್ನು ಮುಗಿಸಿದಾಗ ಹಝ್ರತ್ ಉಮರ್(ರ) ಅವರು ಹೇಳಿದರು: ಇಬ್ನ್ ಅಬ್ಬಾಸ್! ನನ್ನ ಮೇಲೆ ಹಲ್ಲೆ ನಡೆಸಿದವರು ಯಾರು ನೋಡಿ ಎಂದು ಹೇಳಿದರು. ಹಜರತ್ ಇಬ್ನ್ ಅಬ್ಬಾಸ್(ರ) ಸ್ವಲ್ಪ ಹೊತ್ತು ಸುತ್ತಾಡಿದ ನಂತರ ಬಂದು ಮುಗೀರನ ಗುಲಾಮ ಎಂದು ಹೇಳಿದರು. ಹಝ್ರತ್ ಉಮರ್(ರ) ಆ ಕಸುಬುದಾರನೇ? ಎಂದು ಕೇಳಿದರು. ಅದಕ್ಕೆ ಹಝ್ರತ್ ಇಬ್ನ್ ಅಬ್ಬಾಸ್(ರ) ಹೌದು ಎಂದು ಹೇಳಿದರು. ಹಝ್ರತ್ ಉಮರ್(ರ) ಹೇಳಿದರು, "ಅಲ್ಲಾಹನು ಅವನನ್ನು ನಾಶಮಾಡಲಿ. ನಾನು ಅವನನ್ನು ದಯೆಯಿಂದ ನಡೆಸಿಕೊಳ್ಳುವಂತೆ ಆದೇಶಿಸಿದ್ದೆ."

ನಾನು ಮುಸ್ಲಿಂ ಎಂದು ಹೇಳಿಕೊಳ್ಳುವ ವ್ಯಕ್ತಿಯ ಕೈಯಲ್ಲಿ ಸಾಯಲಿಲ್ಲ ಎಂದು ಅಲ್ಲಾಹನಿಗೆ ಧನ್ಯವಾದವನ್ನು ಅರ್ಪಿಸುತ್ತೇನೆ. ಅಂದರೆ ಅವನು ಮುಸ್ಲಿಂ ಅಲ್ಲ ಎಂದು ಸಾಬೀತುಪಡಿಸುತ್ತದೆ. ಓ ಇಬ್ನ್ ಅಬ್ಬಾಸ್! ನೀವು ಮತ್ತು ನಿಮ್ಮ ತಂದೆಯವರು ಈ ಅರಬ್ಬೇತರ ಗುಲಾಮರು ಮದೀನಾದಲ್ಲಿ ಹೆಚ್ಚು ಹೆಚ್ಚಾಗಿರಬೇಕು ಎಂದು ಬಯಸುತ್ತಿದ್ದೀರಿ. ಹಝ್ರತ್ ಅಬ್ಬಾಸ್(ರ) ಹೆಚ್ಚು ಗುಲಾಮರನ್ನು ಹೊಂದಿದ್ದರು. ಆಗ ಹಝ್ರತ್ ಇಬ್ನ್ ಅಬ್ಬಾಸ್ ಹೇಳಿದರು, "ನೀವು ಬಯಸಿದರೆ, ನಾನು ಅದನ್ನು ಮಾಡಬಹುದು." ಅದೇನೆಂದರೆ, ನೀವು ಬಯಸುವುದಾದರೆ, ಮದೀನಾದಲ್ಲಿರುವ ಎಲ್ಲಾ ಅರಬೇತರ ಗುಲಾಮರನ್ನು ಸಹ ನಾವು ಕೊಲ್ಲಬಹುದು. ಹಝ್ರತ್ ಉಮರ್(ರ) ಹೇಳಿದರು, "ಇಲ್ಲ" ಇದು ಸರಿಯಲ್ಲ ಅದರಲ್ಲೂ ಈಗ ಅವರು ನಿಮ್ಮ ಭಾಷೆಯಲ್ಲಿ ಮಾತನಾಡುತ್ತಾರೆ ಮತ್ತು ನಿಮ್ಮ ಕಿಬ್ಲಾಗೆ ಮುಖ ಮಾಡಿ ಪ್ರಾರ್ಥನೆ ಸಲ್ಲಿಸುತ್ತಾರೆ ಮತ್ತು ನಿಮ್ಮಂತೆಯೇ ಹಜ್ ಮಾಡುತ್ತಾರೆ ಎಂದು ಹೇಳಿದರು. ಮುಸಲ್ಮಾನರಾದ ಅನೇಕ ಗುಲಾಮರೂ ಇದ್ದರು. ನಂತರ ನಾವು ಅವರನ್ನು ಎತ್ತಿಕೊಂಡು ಅವರ ಮನೆಗೆ ಕರೆದುಕೊಂಡು ಹೋದೆವು. ನಾವೂ ಅವರ ಜೊತೆ ಮನೆಗೆ ಹೋದೆವು. ಆ ದಿನದ ಮೊದಲು ಯಾವ ಮುಸಲ್ಮಾನರಿಗೆ ಇಂತಹ ವಿಪತ್ತು ಬಂದಿರಲಿಲ್ಲವಂತೆ. ಕೆಲವರು ಹೇಳುತ್ತಾರೆ: ಏನೂ ಆಗುವುದಿಲ್ಲ ಮತ್ತು ಕೆಲವರು ಹೇಳುತ್ತಾರೆ: ಅವರು ಬದುಕಲು ಸಾಧ್ಯವಾಗುವುದಿಲ್ಲ ಎಂದು ನಾನು ಭಯಪಡುತ್ತಿದ್ದೆ. ಅವರಿಗೆ ಮೊದಲು ದ್ರಾಕ್ಷೆ ರಸವನ್ನು, ಅನಂತರ ಹಾಲನ್ನು ಕುಡಿಸಲಾಯಿತು. ಆದರೆ ಅದು ಗಾಯವಾದ ಭಾಗದಿಂದ ಹರಿದುಹೋದವು. ಹಝ್ರತ್ ಉಮರ್(ರ) ಮೃತ್ಯುವಿನ ದವಡೆಯಿಂದ ಪಾರಾಗಲಾರರು ಎಂದು ಜನರಿಗೆ ಗೊತ್ತಾಯಿತು. ಒಬ್ಬ ಯುವಕ ಹಝ್ರತ್ ಉಮರರ(ರ) ಶ್ರೇಷ್ಠತೆಗಳನ್ನು ಹೇಳಲು ಶುರುಮಾಡಿದಾಗ ಹಝ್ರತ್ ಉಮರ್(ರ) ಹೇಳಿದರು: ಈ ಸಂಗತಿಗಳು ಸಮಸಮವಾಗಿ ಇರಲಿ ಎಂದಾಗಿದೆ ನನ್ನ ಅಭಿಲಾಷೆ. ಎಂದರೆ, ನನಗೆ ಶಿಕ್ಷೆಯೂ ಲಭಿಸದಿರಲಿ, ನನಗೆ ಪ್ರತಿಫಲವೂ ಬೇಡ.

ಅಬ್ದುಲ್ಲಾಹ್ ಬಿನ್ ಉಮರ್‌ರಿಂದ(ರ) ಹಝ್ರತ್ ಉಮರ್(ರ) ತನ್ನ ಸಾಲಗಳ ಲೆಕ್ಕವನ್ನು ಮಾಡಿಸಿದರು. ಅದು ಸುಮಾರು 26 ಸಾವಿರ ದಿರ್ಹಂ ಆಗಿತ್ತು. ಅದರ ಪಾವತಿಯ ಕುರಿತು ಹಝ್ರತ್ ಉಮರ್(ರ) ನಿರ್ದೇಶನಗಳನ್ನು ನೀಡಿದರು. ಅನಂತರ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರರನ್ನು(ರ) ಹಝ್ರತ್ ಆಯಿಶರ(ರ) ಬಳಿಗೆ ಕಳುಹಿಸುತ್ತಾ ಅವರು ಹೇಳಿದರು: ಇಬ್ಬರು ಸಂಗಡಿಗರೊಂದಿಗೆ {ಎಂದರೆ, ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ)} ದಫನ್ ಮಾಡಿಸಲು ಉಮರ್ ಬಿನ್ ಖತ್ತಾಬ್ ಅನುಮತಿ ಕೇಳುತ್ತಿದ್ದಾರೆ ಎಂದು ಹಝ್ರತ್ ಆಯಿಶರೊಡನೆ(ರ) ಹೇಳು.

ಅಬ್ದುಲ್ಲಾಹ್ ಬಿನ್ ಉಮರ್(ರ) ಹಝ್ರತ್ ಆಯಿಶರ(ರ) ಬಳಿಗೆ ತಲುಪಿದಾಗ ಅವರು ಅಳುತ್ತಿದ್ದರು. ಹಝ್ರತ್ ಉಮರರ(ರ) ಸಂದೇಶವನ್ನು ಕೇಳಿ ಹಝ್ರತ್ ಆಯಿಶ(ರ) ಹೇಳಿದರು: ನಾನು ಆ

ಜಾಗವನ್ನು ನನಗಾಗಿ ಕಾದಿರಿಸಿದ್ದೆ. ಆದರೆ ಇಂದು ನಾನು ನನ್ನ ಮೇಲೆ ಹಝ್ರತ್ ಉಮರ್‌ರಿಗೆ(ರ) ಆದ್ಯತೆಯನ್ನು ನೀಡುತ್ತೇನೆ. ಹಝ್ರತ್ ಆಯಿಶರಿಂದ(ರ) ಅನುಮತಿ ಲಭಿಸಿದ ಸುದ್ದಿಯನ್ನು ಕೇಳಿ ಹಝ್ರತ್ ಉಮರ್(ರ) ಹೇಳಿದರು: ಅಲ್‌ಹಮ್ದುಲಿಲ್ಲಾಹ್, ನನಗೆ ಇದಕ್ಕಿಂತ ಹೆಚ್ಚು ಬೇರೆ ಯಾವುದೇ ಸಂಗತಿಯ ಬಗ್ಗೆ ಚಿಂತೆಯಿರಲಿಲ್ಲ. (ಸ಼ಹೀಹ್ ಬುಖಾರಿ, ಕಿತಾಬ್ ಫಝಾಎಲ್ ಅಸ್‌ಹಾಬುನ್ನಬಿ(ಸ)), ಹದೀಸ್–3700) (ಉಮ್‌ದತುಲ್ ಖಾರಿ, ಶರಹ್ ಸಹೀಹ್ ಬುಖಾರಿ, ಸಂಪುಟ–16, ಪುಟ–292, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಅಲಿ(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ಝುಬೇರ್(ರ), ಹಝ್ರತ್ ತಲ್‌ಹ(ರ), ಹಝ್ರತ್ ಸಅದ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರನ್ನು(ರ) ಹಝ್ರತ್ ಉಮರ್(ರ) ಖಿಲಾಫತಿನ ಚುನಾವಣೆಗಾಗಿ ನಿಶ್ಚಯಿಸಿದರು ಮತ್ತು ಚುನಾಯಿತರಾಗುವ ಖಲೀಫರು ಮುಹಾಜಿರರೊಂದಿಗೆ, ಅನ್ಸಾರ್, ಮರಳುಗಾಡಿನ ಅರೇಬಿಯರು ಮತ್ತು ನಿರ್ಗತಿಕರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಬೇಕೆಂದು ಉಪದೇಶಿಸಿದರು.

ಹಝ್ರತ್ ಉಮರರ(ರ) ಪ್ರಸ್ತಾಪ ಮುಂದುವರೆಯುವುದು. ಇಂದು ಜರ್ಮನಿಯ ಜಲ್ಸ ಆರಂಭವಾಗುವುದು. ಅಲ್ಲಾಹನು ಈ ಜಲ್ಸವನ್ನು ಅನುಗ್ರಹೀತಗೊಳಿಸಲಿ. ಹೆಚ್ಚು ಹೆಚ್ಚು ಜರ್ಮನ್ ಅಹ್ಮದಿಯರಿಗೆ ಅದರಿಂದ ಪ್ರಯೋಜನ ಪಡೆಯಲು ಸೌಭಾಗ್ಯ ನೀಡಲಿ. ಇದು ಎರಡು ದಿವಸಗಳ ಜಲ್ಸ ಆಗಿದೆ. ನಾಳೆ ಸಮಾರೋಪ ಸಭೆಯಲ್ಲಿ ಸಂಜೆ ನಾನು ಭಾಷಣ ಮಾಡುವನು, ಇನ್ಶಾ ಅಲ್ಲಾಹ್. ಅದು ಎಂ.ಟಿ.ಎ.ದಲ್ಲಿ ಪ್ರಸಾರವಾಗುವುದು.

ನಮಾಝಿನ ನಂತರ ಎರಡು ಜನಾಝಗಳನ್ನು ನಿರ್ವಹಿಸುವೆನು. ಮೊದಲ ಜನಾಝ ಇಂಡೋನೇಶಿಯದ ಮುಬಲ್ಲಿಗ್‌ರಾದ ಸನ್ಮಾನ್ಯ ಖಮರುದ್ದೀನ್ ಸಾಹಿಬ್‌ರದ್ದಾಗಿದೆ. 65ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. 1972ರಲ್ಲಿ ಹದಿನೈದನೇ ವಯಸ್ಸಿನಲ್ಲಿ ಬೈಅತ್ ಮಾಡಿದ್ದರು. ಪ್ರಾಥಮಿಕ ವಿದ್ಯಾಭ್ಯಾಸದ ನಂತರ ತನ್ನ ಜೀವಿತವನ್ನು ಜಮಾಅತಿಗಾಗಿ ವಖ್ಫ್ ಮಾಡಿದರು. ಅನಂತರ ಧಾರ್ಮಿಕ ಶಿಕ್ಷಣಕ್ಕಾಗಿ ಪಾಕಿಸ್ತಾನಕ್ಕೆ ಹೋದರು. 1986, ಜೂನ್ 30ರಂದು ಶಾಹಿದ್ ಡಿಗ್ರಿ ಪಡೆದರು. ಜೂಲೈ 1986ರಲ್ಲಿ ಮುಬಲ್ಲಿಗರಾಗಿ ನಿಶ್ಚಯಿಸಲ್ಪಟ್ಟರು. ಬಹಳ ಮಧುರವಾದ ಸ್ವರದಲ್ಲಿ ಮತ್ತು ಭಾವುಕರಾಗಿ ಪವಿತ್ರ ಖುರ್‌ಆನಿನ ತಿಲಾವತ್ ಮಾಡುತ್ತಿದ್ದರು. ಜಮಾಅತಿನ ಅತ್ಯಂತ ನಿಷ್ಠಾವಂತ ಮತ್ತು ಆವೇಶಭರಿತ ಸೇವಕರಾಗಿದ್ದರು. ಅವರ ಸೇವೆಯ ಕಾಲಾವಧಿ ಸುಮಾರು 35 ವರ್ಷಗಳದ್ದಾಗಿದೆ. ಅವರು ಪತ್ನಿ ಹೇಳುತ್ತಾರೆ: ನೀನು ಕೇವಲ ಮುರಬ್ಬಿಯ ಪತ್ನಿಯಾಗಿದ್ದೀ ಎಂಬುದರಲ್ಲಿ ಮಾತ್ರ ತೃಪ್ತರಾಗುಬಾರದು. ಜಮಾಅತಿನ ಸೇವೆಯನ್ನೂ ಸಹ ಮಾಡಬೇಕು ಎಂದು ನನ್ನ ಪತಿ ನನ್ನೊಡನೆ ಹೇಳುತ್ತಿದ್ದರು. ಪತಿಗೆ ಖಿಲಾಫತಿನೊಂದಿಗೆ ಇದ್ದ ಅನುಸರಣೆ ಮತ್ತು ಪ್ರೀತಿಯ ಬಗ್ಗೆ ಪತ್ನಿ ಬರೆಯುತ್ತಾರೆ: ಅವರಿಗೆ ಖಿಲಾಫತಿನೊಂದಿಗೆ ಅನುಸರಣೆ ಮತ್ತು ಪ್ರೇಮ ಬಹಳವಿತ್ತು. ಹಿರಿಯರು ಮತ್ತು ಕಿರಿಯರೊಂದಿಗೆ ಬಹಳ ಗೌರವದಿಂದ ವರ್ತಿಸುತ್ತಿದ್ದರು. ಯಾವನಾದರೂ ಅಹ್ಮದಿಯೊಂದಿಗೆ ಮಾತನಾಡುವಾಗ ಸದಾ ಜಮಾಅತಿನೊಂದಿಗೆ ಪ್ರೀತಿ ಮತ್ತು ನಿಷ್ಠೆಯನ್ನು ಇರಿಸಲು ಖಂಡಿತವಾಗಿಯೂ ಉಪದೇಶಿಸುತ್ತಿದ್ದರು. ಹೆಚ್ಚು ಹೆಚ್ಚು ಜಮಾಅತಿನ ಸೇವೆ ಮಾಡಲು ಹುರಿದುಂಬಿಸುತ್ತಿದ್ದರು. ಅಹ್ಮದಿಯೇತರರೊಂದಿಗೆ ಭೇಟಿಯಾದರೆ ಅವರಿಗೆ ಖಂಡಿತ ತಬ್ಲೀಗ್ ಮಾಡುತ್ತಿದ್ದರು. ಬಹಳ ಪ್ರೀತಿಯಿಂದ ಮತ್ತು ಮನಸ್ಸಾರೆ ಮಾತನಾಡುತ್ತಿದ್ದರು. ಇದರಿಂದ ಇತರರು ಸಹ ಸಂತೋಷಗೊಳ್ಳುತ್ತಿದ್ದರು. ರೋಗಾವಸ್ಥೆಯಲ್ಲೂ ಫಜ್ರ್ ನಮಾಝಿನ ಸಮಯಕ್ಕೆ ಒಂದುವರೆ ಎರಡು ಗಂಟೆಗಳಿಗೆ ಮುಂಚೆ ಎದ್ದು ತಹಜ್ಜುದ್ ನಮಾಝ್ ನಿರ್ವಹಿಸುತ್ತಿದ್ದರು ಮತ್ತು ತಿಲಾವತ್ ಮಾಡುತ್ತಿದ್ದರು. ಆರೋಗ್ಯವಿದ್ದ ಕಾಲದ ವರೆಗೂ ನಡೆದುಕೊಂಡೇ ಮಸೀದಿಗೆ ಹೋಗುತ್ತಿದ್ದರು. ಅವರ ಒಬ್ಬ ಮಗನಾದ ಉಮರ್ ಫಾರೂಖ್ ಸಾಹಿಬ್‌ರು ಇಂಡೋನೇಶಿಯ ಜಾಮಿಅ ಅಹ್ಮದಿಯದ ಉಸ್ತಾದ್ ಆಗಿರುವರು. ಅವರು ಹೇಳುತ್ತಾರೆ: ಮನೆಯಲ್ಲೂ ಮತ್ತು ಹೊರಗೂ ನಡೆಯುತ್ತಾ ಇರುವಾಗ ಕೆಲವೊಮ್ಮೆ ಪವಿತ್ರ ಖುರ್‌ಆನಿನ ಯಾವುದಾದರೂ ಭಾಗವನ್ನು ಮಧುರ ಸ್ವರದಿಂದ ಪಾರಾಯಣ ಮಾಡುತ್ತಿರುತ್ತಿದ್ದರು. ಹಝ್ರತ್ ಮಸೀಹ್ ಮೌಊದ್‌ರ(ಅ) ಗ್ರಂಥಗಳ ತರ್ಜುಮೆ ಮತ್ತು ಪ್ರೂಫ್ ರೀಡಿಂಗಿನ ಕೆಲಸ ಸಹ ಅವರು ಮಾಡುತ್ತಿದ್ದರು. ವಿಶೇಷವಾಗಿ ತರ್ಜುಮೆಯ ಕೆಲಸ ಮಾಡುತ್ತಿದ್ದ ಕಾಲದಲ್ಲಿ ಹೆಚ್ಚಾಗಿ ಖಸೀದ ಓದುತ್ತಿದ್ದರು. ಹಝ್ರತ್ ಪೈಗಂಬರರ(ಸ) ಘಟನೆಗಳನ್ನು ಮತ್ತು ಜೀವನಚರಿತ್ರೆಯನ್ನು ಹೇಳಿಕೊಡುವಾಗ ಕಣ್ಣುಗಳು ತೇವವಾಗುತ್ತಿತ್ತು. ಹೆಚ್ಚಾಗಿ ನನಗೆ ಅಹ್ಮದಿಯರಿಗೆ ಉಂಟಾದ ಪರೀಕ್ಷಣೆಗಳು, ಕಷ್ಟತೆಗಳು ಮತ್ತು ತ್ಯಾಗಗಳ ಬಗ್ಗೆ ಇರುವ ಘಟನೆಗಳನ್ನು ಹೇಳಿ ಕೊಡುತ್ತಿದ್ದರು. ಅವರು ಸಹ ಹೇಗೆ ಕಷ್ಟತೆಗಳನ್ನು ಸಹಿಸಿದರು ಎಂಬುದಾಗಿ ತನ್ನ ಸ್ವಂತ ಅನುಭವಗಳನ್ನು ಸಹ ಹೇಳಿಕೊಡುತ್ತಿದ್ದರು.

ಕಿರಿಯ ಮಗನಾದ ಝಫರುಲ್ಲಾಹ್ ಖಾನ್ ಸಾಹಿಬ್ ಹೇಳುತ್ತಾರೆ: ತಂದೆಯವರು ಬಹಳ ಧೃಢನಿಶ್ಚಯವಿದ್ದ ಮತ್ತು ಧೈರ್ಯಶಾಲಿ ವ್ಯಕ್ತಿಯಾಗಿದ್ದರು. ಬಹಳ ಸರಳ ಜೀವಿತವನ್ನು ಸಾಗಿಸಿದರು. ಸದಾ ಇದ್ದುದ್ದರಲ್ಲಿ ತೃಪ್ತರಾಗುವುದನ್ನು ಇಷ್ಟಪಡುತ್ತಿದ್ದರು. ಅಲ್ಲಾಹನು ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ, ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ಸುಲ್ತಾನ್ ಅಹ್ಮದ್ ಹಾರೂನ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಬೀಹ ಹಾರೂನ್ ಸಾಹಿಬ್‌ರದ್ದಾಗಿದೆ. 73ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಸಬೀಹ ಹಾರೂನ್ ಸಾಹಿಬರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆಯ ಬೈಅತಿನೊಂದಿಗೆ ಪ್ರವೇಶಿಸಿತ್ತು. ಅವರು ಸ್ವತಃ ಶೋಧನೆ ನಡೆಸಿ 18ನೇ ವಯಸ್ಸಿನಲ್ಲಿ ಹಝ್ರತ್ ಮುಸ್ಲಿಹ್ ಮೌಊದ್‌ರ ಕಾಲದಲ್ಲಿ ಬೈಅತ್ ಮಾಡಿದ್ದರು. ಅನಂತರ ಸಬೀಹ ಸಾಹಿಬ್‌ರ ತಾತ ಸಬೀಹ ಸಾಹಿಬ್‌ರ ತಂದೆಯ ನಂತರ ಬೈಅತ್ ಮಾಡಿದರು. ಅಲ್ಲಾಹನು ಸಬೀಹ ಸಾಹಿಬರಿಗೆ ಮೂವರು ಪುತ್ರರನ್ನು ಮತ್ತು ಮೂವರು ಪುತ್ರಿಯರನ್ನು ದಯಪಾಲಿಸಿದನು. ಒಬ್ಬ ಮಗನು ಹಝ್ರತ್ ಖಲೀಫತುಲ್ ಮಸೀಹ್ ರಾಬೀಅ್‌ರ ಅಳಿಯರಾಗಿರುವರು.

ಸಬೀಹ ಸಾಹಿಬ್‌ರ ಹಿರಿಯ ಮಗನಾದ ಸುಲ್ತಾನ್ ಮುಹಮ್ಮದ್ ಖಾನ್ ಸಾಹಿಬ್‌ರು ಹೇಳುತ್ತಾರೆ: ನನ್ನ ತಾಯಿಯ ಹಿರಿಯ ಮಗನು ಎರಡನೇ ವಯಸ್ಸಿನಲ್ಲಿ ಆಕಸ್ಮಿಕ ಮರಣಕ್ಕೆ ತುತ್ತಾಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್‌ರು ಅವರ ಜನಾಝ ನಿರ್ವಹಿಸುವಾಗ ನನ್ನ ತಂದೆಯಾದ ಮಲಿಕ್ ಸುಲ್ತಾನ್ ಸಾಹಿಬ್‌ರೊಡನೆ ಹೀಗೆ ಹೇಳಿದರು: ಅಲ್ಲಾಹನು ಇವನಿಗೆ ಬದಲಾಗಿ ಇನ್ನೊಂದು ಪುತ್ರನನ್ನು ನಿನಗೆ ನೀಡುವನು. ಅವನು ಸುಂದರೂ ದೀರ್ಘಾಯುಸ್ಸನ್ನು ಪಡೆಯುವವನೂ ಆಗಿರುವನು. ಅವನು ನಿನ್ನ ಹೆಗಲಿಗೆ ಹೆಗಲು ಸೇರಿಸಿ ಯುವಕನಾಗಿ ನಿಲ್ಲುವುದಾಗಿ ನಾನು ನೋಡುತ್ತಿದ್ದೇನೆ. ಅವರ ಮಗನಾದ ಸುಲ್ತಾನ್ ಅಹ್ಮದ್ ಖಾನ್ ಹೇಳುತ್ತಾರೆ: ನನಗೆ ಚಿಕ್ಕಂದಿನಿಂದ ಈಗಿನ ತನಕ ಹೆಚ್ಚಿನ ಸಮಯ ತಾಯಿಯೊಂದಿಗೆ ಇರಲು ಸೌಭಾಗ್ಯ ಸಿಕ್ಕಿತ್ತು. ಬಹಳ ವಾತ್ಸಲ್ಯಮಯ ಮತ್ತು ತಪ್ಪುಗಳನ್ನು ಕ್ಷಮಿಸುವ ತಾಯಿಯಾಗಿದ್ದರು. ಎಂದಿಗೂ ಯಾರ ಬಗ್ಗೆಯೂ ದೂಷಣೆ ಮಾಡುತ್ತಿರಲಿಲ್ಲ. ಅವರ ಮಗಳಾದ ಮಹ್ಮೂದ ಸುಲ್ತಾನ ಹೇಳುತ್ತಾರೆ: ನನ್ನ ತಾಯಿಯು ಸುಸ್ವಭಾವಿ, ಮೌನವಾಗಿ ಇರುವ ಗುಣವನ್ನು ಹೊಂದಿರುವ, ಉನ್ನತ ನೈತಿಕಗುಣಗಳನ್ನು ಹೊಂದಿರುವವರಾಗಿದ್ದರು. ಜಮಾಅತಿನ ನೈಜ ಪ್ರೇಮಿ ಮತ್ತು ಖಿಲಾಫತಿನೊಂದಿಗೆ ಅಪರಿಮಿತವಾದ ಪ್ರೀತಿ ಮತ್ತು ನಿಷ್ಠೆಯನ್ನು ಹೊಂದಿದ್ದರು. ಅದರದ್ದೇ ಉಪದೇಶ ಮಾಡುತ್ತಿದ್ದರು. ಹಸನ್ಮುಖಿ ಮತ್ತು ಸಂಬಂಧಿಕರಿಗೆ ನೆರವು ನೀಡುವವರಾಗಿದ್ದರು. ಅವರ ಅತಿಥಿ ಸತ್ಕಾರ ಕುಟುಂಬದಲ್ಲೇ ಪ್ರಸಿದ್ಧವಾಗಿತ್ತು. ಯಾರದ್ದೇ ಮನಸ್ಸನ್ನು ನೋಯಿಸುತ್ತಿರಲಿಲ್ಲ. ಚಾಡಿ ಹೇಳುವುದನ್ನು ಬಹಳ ಅನಿಷ್ಟತೆಯಿಂದ ಕಾಣುತ್ತಿದ್ದರು. ಅದರಿಂದ ರಕ್ಷಣೆ ಹೊಂದಲು ನಮ್ಮೊಡನೆ ಹೇಳುತ್ತಿದ್ದರು. ಹಿಂದಿನಿಂದ ದೂಷಿಸುತ್ತಾ ಮಾತನಾಡುವ ಕೂಟದಿಂದ ಎದ್ದು ಹೋಗುತ್ತಿದ್ದರು. ಅದನ್ನು ಅವರು ಸಹಿಸುತ್ತಿರಲಿಲ್ಲವೆಂದು ಅವರ ಮುಖ ನೋಡಿದರೆ ಗೊತ್ತಾಗುತ್ತಿತ್ತು. ಸದಾ ಕ್ಷಮೆಯಿಂದ ವರ್ತಿಸುತ್ತಿದ್ದರು. ನನ್ನ ತಂದೆಯನ್ನು ಕೊಲೆ ಮಾಡಿದ ಶತ್ರುವಿನ ವಿರುದ್ಧ ಕೂಡ ಶಾಪ ಪ್ರಾರ್ಥನೆ ಮಾಡಿರಲಿಲ್ಲ. ಅಲ್ಲಾಹನು ಅವನಿಗೆ ಸನ್ಮಾರ್ಗ ನೀಡಲಿ ಎಂದು ನಾನು ಪ್ರಾರ್ಥಿಸುತ್ತೇನೆ ಎಂದು ಹೇಳುತ್ತಿದ್ದರು. ನಿರ್ಗತಿಕ ರೋಗಿಗಳಿಗಾಗಿ ವಿಶೇಷವಾಗಿ ಕನಿಕರವನ್ನು ಹೊಂದಿದ್ದರು. ಯಾರಿಗೂ ಅರಿಯದ ರೀತಿಯಲ್ಲಿ ಅವರಿಗೆ ಸಹಾಯ ಮಾಡುತ್ತಿದ್ದರು.

ಅವರ ಎರಡನೇ ಮಗಳಾದ ವಜೀಹ ಸಾಹಿಬ ಹೇಳುತ್ತಾಳೆ: ಒಬ್ಬ ಮೌನಿ ಸ್ವಭಾವದ ಮಹಿಳೆಯಾಗಿದ್ದರು. ಬಹಳ ಹೆಚ್ಚು ದಾನಧರ್ಮಗಳನ್ನು ಮಾಡುತ್ತಿದ್ದರು. ದಾನಧರ್ಮಗಳನ್ನು ಯಾರಿಗೂ ಅರಿಯದ ರೀತಿಯಲ್ಲಿ ಮಾಡುತ್ತಿದ್ದರು. ಅದರ ಬಗ್ಗೆ ಪ್ರಸ್ತಾಪಿಸುವುದನ್ನು ಇಷ್ಟಪಡುತ್ತಿರಲಿಲ್ಲ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

(ಪುಟ ಸಂಖ್ಯೆ 11ರ ಉಳಿದ ಭಾಗ)

ಹಝ್ರತ್ ರಸೂಲುಲ್ಲಾಹ್(ಸ) ನುಡಿದರು. ಹೌದು ಏಕೆಂದರೆ ನೀವು ಅವರ ಮನೆಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತೀರಿ. ಅವರ ಮಕ್ಕಳನ್ನು ತರಬೇತಿ ನೀಡುತ್ತೀರಿ. ಅವರು ಹೋದ ಮೇಲೆ ನೀವು ಮನೆಯ ಉಸ್ತುವಾರಿಯನ್ನು ವಹಿಸಿಕೊಳ್ಳುತ್ತೀರಿ. ಮತ್ತು ಈ ಕಾರಣಗಳಿಂದ ಒಳ್ಳೆಯ ಸಂತಾನವನ್ನು ಜನ್ಮ ನೀಡುತ್ತೀರಿ. ಆದುದರಿಂದ ನಿಮಗೂ ಅವರಷ್ಟೇ ಪುಣ್ಯ ದೊರೆಯುವುದು. ಅಲ್ಲದೆ, ಅವರನ್ನು ಹೊರಗೆ ಹೋಗಿ ಧರ್ಮ ಸೇವೆ ಮಾಡಲು ಕಳುಹಿಸುತ್ತೀರಿ. ಧರ್ಮ ಸೇವೆ ಮಾಡದಿದ್ದರೂ ಹದೀಸಿನಲ್ಲಿ ಹೀಗೂ ಇದೆ. ಮಹಿಳೆಯರು ತಮ್ಮ ಮನೆಯ ಉಸ್ತುವಾರಿ ವಹಿಸಿರುತ್ತಾರೆ. ಹೀಗೆ ವಖ್ಫೆ ನೌ ಅವರ ಜವಾಬ್ದಾರಿಯು ತನ್ನ ಹೊಸ ಪೀಳಿಗೆಯನ್ನು ಅಹ್ಮದಿಯತ್ತಿನ ಮೇಲೆ ಸ್ಥಿರವಾಗಿರುವಂತೆ ಮತ್ತು ಅಲ್ಲಾಹನೊಡನೆ ಅವರ ಸಂಬಂಧ ಜೋಡಿಸುವುದಾಗಿದೆ.

**ಪ್ರಶ್ನೆ: ಗುಲ್ಷನ್ ವಖ್ಫೆ ನೌ ಲಜ್ನಾ, ನಾಸಿರಾತ್ ಸಿಡ್ನಿ ಆಸ್ಟ್ರೇಲಿಯಾ ದಿನಾಂಕ: 07, ಅಕ್ಟೋಬರ್ 2013 ರಲ್ಲಿ ಬಾಲಕಿಯೊಬ್ಬಳು ಹುಝೂರರೊಡನೆ ಕೇಳಿದಳು. ಜನರು ಇಸ್ಲಾಮ್ ಧರ್ಮವನ್ನು ಭಯೋತ್ಪಾದನೆಯೊಂದಿಗೆ ಏಕೆ ಜೋಡಿಸುತ್ತಾರೆ?**

ಹುಝೂರ್ ಅದಕ್ಕೆ ಈ ಕೆಳಗಿನ ಉತ್ತರವನ್ನು ನೀಡಿದರು.

**ಉತ್ತರ:** ಏಕೆಂದರೆ ಇಂದು ಭಯೋತ್ಪಾದಕರ ಎಷ್ಟೆಲ್ಲಾ ಸಂಘಟನೆಗಳಿವೆ. ಉದಾಹರಣೆಗೆ ಅಲ್-ಖಾಯಿದಾ, ತಾಲಿಬಾನ್, ಬೇಕೋ ಹರಾಮ್ ಮತ್ತು ಇಲ್ಲಿ ಉತ್ಪತ್ತಿಯಾಗುವ ಹೊಸ ಹೊಸ ಸಂಘಟನೆಗಳಲ್ಲಿ ಮುಸ್ಲಿಮರಿಗೆ ಸೇರಿದ ಸಂಘಟನೆಗಳು ಹೆಚ್ಚಾಗಿವೆ. ಆದುದರಿಂದ ಜನರು ಭಾವಿಸುತ್ತಾರೆ. ಬಹುಶಃ ಇಸ್ಲಾಂ ಧರ್ಮ ಮತ್ತು ಭಯೋತ್ಪಾದನೆ ಒಂದೇ ಆಗಿದೆ ಎಂದು. ಅದೇ ತಪ್ಪು ಕಲ್ಪನೆಯನ್ನು ನಾವು ಅಳಿಸಿ ಹಾಕಬೇಕಾಗಿದೆ. ಅದೇ ಕಾರಣ ಇಲ್ಲಿ Block stall ನಲ್ಲಿ Pathway to peace ಗ್ರಂಥ ಇಡಲಾಗಿದೆ. ಅದರಲ್ಲಿ ನನ್ನ ವಿಭಿನ್ನ ಭಾಷಣಗಳಿವೆ, ಅದು ವಿವಿಧ ಸಂದರ್ಭಗಳಲ್ಲಿ ಮಾಡಿದ್ದಾಗಿವೆ. ಇಸ್ಲಾಂ ಮತ್ತು ಭಯೋತ್ಪಾದನೆಗೆ ತಾಳ ಹಾಕುವುದು ಬೇಡ. ಇವು ಪ್ರತ್ಯೇಕ ವಸ್ತುಗಳಾಗಿವೆ. ಅವು ಅವರ ನಕಾರಾತ್ಮಕ ಚಿಂತನೆಯಾಗಿವೆ. ಆ ಗ್ರಂಥವನ್ನು ಖರೀದಿಸಿರಿ. (ಹುಝೂರ್ ಈ ಗ್ರಂಥದ ಬೆಲೆಯ ಕುರಿತು ಅದು ಇಲ್ಲಿ ಬಹುಶಃ ಹೆಚ್ಚಿನ ಬೆಲೆಯಲ್ಲಿ ಮಾರುತ್ತಿದ್ದಾರೆ, ಅದನ್ನು ಎರಡು ಡಾಲರ್‌ಗಳಲ್ಲಿ ಮಾರಬೇಕು, ಐದು ಡಾಲರ್‌ಗಳಲ್ಲಿ ಮಾರುತ್ತಿದ್ದಾರೆ ಎಂದು ಕೇಳಿ ಬಂದಿದೆ. ವಾಖಿಫೆ ನೌ ಅವರಿಗಂತೂ ಎರಡು ಡಾಲರ್‌ಗಳಲ್ಲಿಯೇ ಮಾರಬೇಕಾಗಿದೆ.) ಅದನ್ನು ಖರೀದಿಸಿರಿ ಮತ್ತು ಓದಿರಿ. ಅದರಲ್ಲಿ ನಿಮಗೆ ನೀವು ಬರೆದ ಎಲ್ಲದಕ್ಕೂ ಉತ್ತರ ದೊರೆಯುವುವು. ಇದು ತಪ್ಪು ಕಲ್ಪನೆಯಾಗಿದೆ. ಇಸ್ಲಾಂ ತುಂಬಾ ಸುಂದರ ಶಿಕ್ಷಣ ಹೊಂದಿದೆ. ಇಸ್ಲಾಂ ಎಂದೂ ಸಹ ಯುದ್ಧಗಳಿಗೆ ಖುದ್ದಾಗಿ ಮುಂದಾಗಲಿಲ್ಲ ಭಯೋತ್ಪಾದನೆಯೂ ಎಸಗಲಿಲ್ಲ. ಮಕ್ಕ ವಿಜಯ ಸಾಧಿಸಿದಾಗ ಹಝ್ರತ್ ರಸೂಲುಲ್ಲಾಹ್(ಸ) ಎಲ್ಲರಿಗೂ ಕ್ಷಮೆ ನೀಡಿದರು. ತನ್ನ ಶತ್ರುಗಳಿಗೂ ಸಹ ಕ್ಷಮಿಸಿದರು. ಪವಿತ್ರ ಖುರ್‌ಆನ್ ಹೇಳುತ್ತದೆ. ಯಾರಿಗೂ ಸಹ ವಿನಾಕಾರಣ ಹತ್ಯೆ ಮಾಡಬೇಡಿರಿ. ಒಬ್ಬನ ಹತ್ಯೆ ಮಾಡಿದರೆ ಅದರ ತಾತ್ಪರ್ಯ ಇಡೀ ಮಾನವ ಕುಲದ ಹತ್ಯೆ ಮಾಡಿದಂತೆ. ಈ ಮುಸಲ್ಮಾನರೆಂಬುವವರು ಯಾರ ಹತ್ಯೆ ಮಾಡುತ್ತಿದ್ದಾರೆ? ಕ್ರೈಸ್ತರ ಹತ್ಯೆ ಮಾಡುತ್ತಿಲ್ಲ. ಮುಸಲ್ಮಾನರಿಗೆ ಮುಸಲ್ಮಾನರೇ ಹೆಚ್ಚು ಹತ್ಯೆ ಮಾಡುತ್ತಿದ್ದಾರೆ. ಪಾಕಿಸ್ತಾನದಲ್ಲಿ ದಿನ ನಿತ್ಯ ಆಗುತ್ತಿರುವ ಹಲ್ಲೆಗಳು, ಇರಾಖಿನಲ್ಲಿ ಶಿಯಾ ಅವರ ಹತ್ಯೆ ಮಾಡುತ್ತಿದ್ದಾರೆ ಅಥವಾ ಶಿಯಾದವರು ಸುನ್ನಿಗಳ ಹತ್ಯೆ ಮಾಡುತ್ತಿದ್ದಾರೆ ಅಥವಾ ಸರ್ವತ್ರ Suicide Bombing (ಆತ್ಮಹತ್ಯೆ ಬಾಂಬಿಂಗ್) ಆಗುತ್ತಿವೆ. ಮುಸಲ್ಮಾನರೇ ಸಾಯುತ್ತಿದ್ದಾರೆ. ಚರ್ಚಿನ ಮೇಲೆ ಈಗ ಆಕ್ರಮಣ ಆಗಿದೆ. ಅದರಲ್ಲಿ ನೂರು, ಇನ್ನೂರು ಕ್ರೈಸ್ತರು ಹತರಾಗಿದ್ದಾರೆ. ಆದರೆ ಉಳಿದದ್ದು ಮುಸಲ್ಮಾನರೇ ಹತ್ಯೆ ಮಾಡುತ್ತಿದ್ದಾರೆ. ಅಹ್ಮದಿಯರ ಹತ್ಯೆ ಮಾಡುತ್ತಿದ್ದಾರೆ. ಅಥವಾ ಇತರ ಬಾಂಬ್ ಹಾಕುತ್ತಿದ್ದಾರೆ. ಇವೆಲ್ಲ ಭಯೋತ್ಪಾದನೆಯೇ ಆಗಿವೆ. ಒಬ್ಬರು ಮತ್ತೊಬ್ಬರನ್ನು ಕೊಲ್ಲುತ್ತಿದ್ದಾರೆ. ಅದಕ್ಕೆ ಎಲ್ಲೂ ಅನುಮತಿ ಇಲ್ಲ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದನು. ನೀವು ಪರಸ್ಪರ ಅತ್ಯಂತ ಕರುಣೆದೋರುವವರಾಗಿರಿ. ಇವರೆಂದರೆ ಮುಸಲ್ಮಾನರೇ ಕೊಲ್ಲುತ್ತಿದ್ದಾರೆ. ಒಬ್ಬ ಮುಸಲ್ಮಾನನಿಗೆ ಕಾರಣವಿಲ್ಲದೆ ಹತ್ಯೆ ಮಾಡುವುದೆಂದರೆ, ಅಲ್ಲಾಹನು ಅವರನ್ನು ನರಕಕ್ಕೆ ಹಾಕುವೆನು ಎಂದು ಹೇಳಿರುವನು. ಅಂದರೆ ಇವರೆಲ್ಲ ಈ ನರಕವಾಸಿಗಳಾಗುತ್ತಿದ್ದಾರೆ. ಅಂತೂ ಇಸ್ಲಾಮ್ ಧರ್ಮಕ್ಕೆ ಮತ್ತು ಭಯೋತ್ಪಾದನೆಗೆ ಯಾವ ಸಂಬಂಧವೂ ಇಲ್ಲ. ಇಸ್ಲಾಮ್ ಪದವನ್ನೇ ನೋಡಿಕೊಳ್ಳಿ ಅದರರ್ಥ ಶಾಂತಿ ಎಂದಾಗಿದೆ. ನೀವು MTA ನೋಡುವವರಾಗಿದ್ದರೆ, ಕನಿಷ್ಠ ವಾಖಿಫೀನೆ ನೌ ಅವರು ಅವಶ್ಯವಾಗಿ ಕೇಳಲೇಬೇಕಾಗಿದೆ. ಯು.ಕೆ ಜಲ್ಸಾದ ನನ್ನ ಅಂತಿಮ ಭಾಷಣದಲ್ಲಿ–ಇಸ್ಲಾಂ ಎಂದರೇನು, ಮುಸಲ್ಮಾನರೆಂದರೆ ಯಾರು, ವಿಷಯವೇ ಆಧಾರವಾಗಿತ್ತು. ಹಾಗಾಗಿ ಈ ಗ್ರಂಥವನ್ನು ಖರೀದಿಸಿ ಓದಿರಿ. ಅದು ಇಂಗ್ಲೀಷ್‌ನಲ್ಲಿದೆ. ನೀವು ಓದಬಹುದು. **(ಸಂಕಲನ ರಘುಹೀರ**

**ಅಹ್ಮದ್ ಖಾನ್, ರೆಕಾರ್ಡ್ ವಿಭಾಗ, ಪಿ ಎಸ್ ಕಚ್ಚೇರಿ, ಲಂಡನ್)**
**ಕೃಪೆ : ಅಲ್–ಫಝ್ಲ್ International (4 ಡಿಸೆಂಬರ್ 2020)**

(ಪುಟ ಸಂಖ್ಯೆ 02ರ ಉಳಿದ ಭಾಗ)

**ಅವಶ್ಯವಾಗಿ ಅನುಭವಿಸುವುದು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಇದು ಸಹ ನ್ಯಾಯಯುತ ವಿಷಯವಾಗಿದೆ. ದೇಹವು ತನ್ನೆಲ್ಲ ಗುಣಶಕ್ತಿಗಳೊಂದಿಗೆ ಆತ್ಮದೊಂದಿಗೆ ಸಂಬಂಧ ಹೊಂದಿದ ಮೇಲೆ ಆ ದೈಹಿಕ ಗುಣಶಕ್ತಿಗಳು ಒಂದು ಸುಖ ಅನುಭವಿಸುವುದು ಇಲ್ಲ ದುಃಖದಲ್ಲಿರುವುವು ಏಕೆಂದರೆ ಎರಡೂ ಸ್ಥಿತಿಗಳು ಕೂಡುವುದು ಕಷ್ಟಕರ. ಅಂದಹಾಗೆ ಇಂತಹ ಅವಸ್ಥೆಯಲ್ಲಿ ನಂಬಲೇಬೇಕಾಗುವುದೇನೆಂದರೆ ಯಾವ ರೀತಿ ಶಿಕ್ಷೆಯ ಅವಸ್ತೆಯಲ್ಲಿ ದುಃಖಪಡುತ್ತದೆಯೋ ಅದೇ ರೀತಿ ಪ್ರತಿಫಲ ಸಯದಲ್ಲೂ ಒಂದು ರೀತಿಯ ಸುಖವು ಸಹ ಅವಶ್ಯವಾಗಿ ಅನುಭವಿಸುವುದು. ಅದೇ ಸುಖದ ಅನುಭವದ ವಿವರ ಪವಿತ್ರ ಖುರ್‌ಆನ್‌ನಲ್ಲಿ ಹೀಗಿದೆ.

**ಸ್ವರ್ಗದ ಅನುಗ್ರಹಗಳು ಊಹಾತೀತವಾಗಿವೆ. ಅದರ ನಿಜವಾದ ಜ್ಞಾನ ಯಾರಿಗೂ ನೀಡಲಾಗಿಲ್ಲ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಹೌದು ಅಲ್ಲಾಹನು ಹೀಗೂ ನುಡಿಯುತ್ತಾನೆ. ಸ್ವರ್ಗದ ಅನುಗ್ರಹಗಳು ಊಹಾತೀತವಾಗಿವೆ. ನಿಮಗೆ ಅದರ ನಿಜವಾದ ಜ್ಞಾನ ನೀಡಲಾಗಿಲ್ಲ, ನೀವು ಇಲ್ಲಿ ಗೌಪ್ಯವಿರುವಂತಹ ಅನುಗ್ರಹಗಳು ಅಲ್ಲಿ ಪಡೆಯುವಿರಿ. ಅದು ಇಹಲೋಕದಲ್ಲಿ ಯಾರು ಕಂಡಿರಲಿಕ್ಕಿಲ್ಲ, ಕೇಳಿರಲಿಕ್ಕಿಲ್ಲ, ಮನಸ್ಸಿನಲ್ಲಿ ಊಹಿಸಿರಲಿಕ್ಕೂ ಇಲ್ಲ. ಅವೆಲ್ಲಾ ಗೌಪ್ಯ ಕಾರ್ಯಗಳಾಗಿವೆ. ಅದು ಸಮಯ ಬಂದಾಗ ಮಾತ್ರ ನಿಮಗೆ ತಿಳಿಯುವುದು. ಏನೆಲ್ಲ ಖುರ್‌ಆನ್ ಮತ್ತು ಹದೀಸುಗಳಲ್ಲಿ ವಾಗ್ದಾನ ನೀಡಲಾಗಿದೆ. ಅವೆಲ್ಲಾ ಸಾದೃಶ್ಯ ರೂಪದಲ್ಲಿ ವಿವರಿಸಲಾಗಿದೆ. ಅದರ ಜೊತೆಯಲ್ಲಿ ಹೀಗೂ ಹೇಳಲಾಗಿದೆ. ಅವು ಗೌಪ್ಯ ಕಾರ್ಯಗಳಾಗಿವೆ. ಯಾರಿಗೂ ಅದರ ಮಾಹಿತಿ ನೀಡಲಾಗಿಲ್ಲ, ಅಂದ ಹಾಗೆ ಅದರ ಅನುಭವ ಇಹಲೋಕದ ಶರಬತ್ತು ಸೇವಿಸುವಾಗ, ಮಹಿಳೆಯೊಂದಿಗೆ ಸೇರುವಾಗ ಸಿಗುವಷ್ಟೇ ಸುಖ ಅನುಭವಿಸುವುದಾದರೆ ಅಲ್ಲಾಹನು ಹೀಗೆ ಹೇಳುತ್ತಿರಲಿಲ್ಲ. ಯಾವ ಕಣ್ಣು ಕಂಡಿರಲಿಕ್ಕಿಲ್ಲ. ಯಾವ ಕಿವಿ ಕೇಳಿರಲಿಕ್ಕಿಲ್ಲ. ಯಾವ ಮನಸ್ಸು ಎಂದೂ ಊಹಿಸಿರಲಿಕ್ಕಿಲ್ಲ, ಅಂತೂ ಮುಸ್ಲಿಮರಾದ ನಾವು ಈ ಮಾತಿನ ಮೇಲೆ ವಿಶ್ವಾಸಿ ಹೊಂದಿರುತ್ತೇವೆ. ಸ್ವರ್ಗ ಆತ್ಮ ಮತ್ತು ದೇಹ, ಎರಡಕ್ಕೂ ಪ್ರತಿಫಲ ತಾಣವಾಗಿದೆ. ಅದೊಂದು ಅರ್ಧಂಬರ್ಧ ಮತ್ತು ನ್ಯೂನತೆಯುಳ್ಳ ಪ್ರತಿಫಲ ತಾಣವಲ್ಲ. ಬದಲು ಅದರಲ್ಲಿ ಆತ್ಮ ಮತ್ತು ದೇಹ ಎರಡಕ್ಕೂ ಅವರವರ ಸ್ಥಿತಿ ಅನುಸಾರ ಪ್ರತಿಫಲ ದೊರೆಯುವುದು. ನರಕದಲ್ಲಿ ಅವರವರ ಸ್ಥಿತಿ ಅನುಸಾರ ಶಿಕ್ಷೆ ದೊರೆಯುವಂತೆ ಅದರ ಯಥಾರ್ಥ ವಿವರಗಳನ್ನು ನಾವು ಅಲ್ಲಾಹನಿಗೆ ಒಪ್ಪಿಸುತ್ತೇವೆ ಮತ್ತು ವಿಶ್ವಾಸ ಹೊಂದಿರುತ್ತೇವೆ. ಶಿಕ್ಷೆಯಾಗಲಿ ಪ್ರತಿಫಲವಾಗಲಿ ಆತ್ಮ ಮತ್ತು ದೇಹ ಎರಡೂ ರೀತಿಯಲ್ಲಿ ದೊರೆಯುವುದು ಮತ್ತು ಅದೇ ವಿಶ್ವಾಸ ವಿವೇಕ ಹಾಗೂ ನ್ಯಾಯಕ್ಕೆ ಅನುಗುಣವಾಗಿದೆ.

**ಖುರ್‌ಆನ್ ಸ್ಪಷ್ಟವಾಗಿ ತಿಳಿಸುತ್ತದೆ. ಮನುಷ್ಯನು ಸ್ವರ್ಗದಲ್ಲಿ ಆತ್ಮ ಮತ್ತು ದೇಹ ಎರಡೂ ರೀತಿಯಲ್ಲೂ ಪ್ರತಿಫಲ ಪಡೆಯುತ್ತಾನೆ. ದೈಹಿಕ ಅನುಗ್ರಹಗಳೂ ದೊರೆಯುವುವು ಮತ್ತು ದರ್ಶನದ ಸುಖವು ಪಡೆಯುವುದು. ಅದು ಅತ್ಯುತ್ತಮ ಸುಖವಾಗಿದೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಪವಿತ್ರರ ಖುರ್‌ಆನ್‌ನ ಕೇವಲ ಶಾರೀರಿಕ ಸ್ವರ್ಗದ ವಾಗ್ದಾನ ನೀಡುತ್ತದೆ ಎಂಬ ಅಪವಾದ ಹೊರೆಸುವುದು ಅತ್ಯಂತ ಪಿತೂರಿದಾಯಕ ಮತ್ತು ಅಪವಿತ್ರ ಹಾಗೂ ಧರ್ಮಬಾಹಿರ ಕೆಲಸವಾಗಿದೆ. ಖುರ್‌ಆನ್ ಸ್ಪಷ್ಟವಾಗಿ ತಿಳಿಸುತ್ತದೆ. ಸ್ವರ್ಗದಲ್ಲಿ ಸೇರಿದ ಎಲ್ಲರೂ ಆತ್ಮ ಮತ್ತು ದೇಹ ಸಮೇತ ಪ್ರತಿಫಲ ಪಡೆಯುವರು, ಯಾವ ರೀತಿ ದೈಹಿಕ ಅನುಗ್ರಹಗಳು ದೊರೆಯುವುವು. ಹಾಗೆಯೇ ದೇವದರ್ಶನ ಸುಖವು ಪಡೆಯುವನು ಮತ್ತು ಅದೇ ಅತ್ಯುತ್ತಮ ಸ್ವರ್ಗವಾಗಿದೆ. ಆಧ್ಯಾತ್ಮಿಕ ಜ್ಞಾನದ ಸುಖವು ದೊರೆಯುವುದು. ಮತ್ತು ತರಹ ತರಹದ ಪ್ರಕಾಶಗಳ ಸುಖವು ದೊರೆಯುವುದು, ಆರಾಧನೆಗಳ ಸುಖವು ದೊರೆಯುವುದು, ಆದರ ಜೊತೆಯಲ್ಲಿ ಶರೀರವು ಸಹ ಆ ಸೌಭಾಗ್ಯ ಪಡೆಯುತ್ತದೆ. ನಾವು ಖಡಾಖಂಡಿತವಾಗಿ ವಾದಿಸುತ್ತೇವೆ. ಯಾವ ಮಟ್ಟದ ಸ್ವರ್ಗಿಯರ ಆಧ್ಯಾತ್ಮಿಕ ಪ್ರತಿಫಲದ ಅನುಭವವನ್ನು ಖುರ್‌ಆನ್‌ನಲ್ಲಿ ಬರೆಯಲ್ಪಟ್ಟಿದೆಯೋ ಅದು ಇಂಜೀಲ್‌ನಲ್ಲಿ ಖಂಡಿತವಾಗಿಯೂ ಇಲ್ಲ ಯಾರಿಗೆ ಸಂಶಯವಿದೆಯೋ ತಮ್ಮ ಎದುರಿಗೆ ಬರಲಿ ಮತ್ತು ನಮ್ಮಿಂದ ಆಲಿಸಲಿ, ಇಂಜೀಲ್‌ನಲ್ಲಿ ಖುರ್‌ಆನ್‌ಗಿಂತ ಹೆಚ್ಚು ವಿವರ ಸ್ವರ್ಗವಾಸಿಯರ ಆಧ್ಯಾತ್ಮಿಕ ಪ್ರತಿಫಲಗಳ

ಬಗ್ಗೆ ವಿವರವಿದೆ ಎಂದು ಸಾಬೀತುಪಡಿಸಿದರೆ ಈ ಬಗ್ಗೆ ಇಂಜೀಲಿನ ಶಿಕ್ಷಣ ತಿಳಿಸಿದರೆ ಅದು ಪ್ರಭುತ್ವ ಪಡೆದರೆ, ನಾವು ಪ್ರತಿಜ್ಞೆಗೈದು ಹೇಳುತ್ತೇವೆ. ಅದೇ ಸಮಯ ಒಂದು ಸಾವಿರ ರೂಪಾಯಿ ನಗದು ಬಹುಮಾನ ನೀಡುವೆವು. ಎಲ್ಲಿ ಬೇಕಾದಲ್ಲಿ ವಿಧಿಬದ್ಧವಾಗಿ ಬರಹ ರೂಪದಲ್ಲಿ ಕೊಟ್ಟು ಸಂಗ್ರಹಿಸಲಿ.

**ಒಂದು ಸಾವಿರ ರೂಪಾಯಿಯ ವೈಭವಯುತ ಬಹುಮಾನದ ಪಂಥಾಹ್ವಾನ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಓ ಅಂಧರೇ! ಖುರ್‌ಆನ್‌ನ ಎದುರಿನಲ್ಲಿ ಇಂಜೀಲ್ ಏನೂ ಇಲ್ಲ, ನಿಮಗೇನು ಕೇಡು ಬಂದಿದೆ. ಮನೆಯಲ್ಲಿ ಆರಾಮವಾಗಿ ಕುಳಿತುಕೊಳ್ಳಿ! ಈಗ ನಿಮ್ಮ ಅವಹೇಳನದ ಸಮಯ ಬಂದಿದೆ. ನಿಮ್ಮ ಪೈಕಿ ಮನುಷ್ಯರಾಗಿ ನನ್ನ ಎದುರಿಗೆ ಬಂದು ವಾದಿಸುವ ಧೈರ್ಯವಿದೆಯೇ? ಸ್ವರ್ಗದ ಆಧ್ಯಾತ್ಮಿಕ ಪ್ರತಿಫಲದ ಕುರಿತು ಇಂಜೀಲ್‌ನಲ್ಲಿ ಖುರ್‌ಆನ್‌ಗಿಂತ ಹೆಚ್ಚು ವಿವರವಿದೆಯೇ? ಇಂಜೀಲ್‌ನಲ್ಲಿ ಹೆಚ್ಚು ವಿವರಗಳು ಒದಗಿ ಬಂದಲ್ಲಿ ನನ್ನಿಂದ ಒಂದು ಸಾವಿರ ರೂಪಾಯಿ ನಗದು ಪಡೆಯಲಿ. ಎಲ್ಲಿ ಬೇಕಾದರೂ ಜಮಾ ಮಾಡಿಕೊಳ್ಳಲಿ. ನನ್ನ ಮುಂದೆ ಬರುವರು ಎಂದು ನನಗೆ ಭರವಸೆ ಇಲ್ಲ. ಅಕಟಾಕಟ! ಇದೆಂತಹ ದೌರ್ಜನ್ಯ ಮತ್ತು ವಂಚಕ ಸಮುದಾಯವಾಗಿದೆ. ಅವರು ಐಹಿಕ ಸುಖಕ್ಕಾಗಿ ಪರಲೋಕವನ್ನು ಮರೆತರು. ಆದರೆ ಅವರು ಒಂದಿಷ್ಟು ಮರಣದ ಬಟ್ಟಲಿನಿಂದ ಸೇವಿಸಿ ನೋಡಲಿ ಅವರು ತಿಳಿಯಬಹುದು. ಯೇಸು ಎಲ್ಲಿದ್ದಾರೆ ಮತ್ತು ಅವರ ಪಾಪ ಪರಹಾರ ಏನಾಗಿದೆ ಎಂದು, ಅಕಟಾ! ಆ ಜನರು ದುರ್ಬಲ ಮನುಷ್ಯನೊಬ್ಬನನ್ನು ದೇವರನ್ನಾಗಿ ಮಾಡಿದರು ಮತ್ತು ಪವಿತ್ರವಾದ ಅಲ್ಲಾಹನ ಮೇಲೆ ಅಪಹಾಸ್ಯದ ಮಾತುಗಳನ್ನು ಆಡಿದರು. ಲೋಕದಲ್ಲಿ ಒಬ್ಬನೇ ಒಬ್ಬನು ಪರಿಪೂರ್ಣ ಏಕದೇವತ್ವವನ್ನು ಸಾರಿದಾಗಲು ಅವರು ಶತ್ರುತ್ವವನ್ನು ತೋರಿದರು.

**ಇಂಜೀಲ್ ದೈಹಿಕ ಪ್ರತಿಫಲಗಳಿಂದ ತುಂಬಿ ಹೋಗಿದೆ.**
**ಯೇಸು ಮಸೀಹರು ಸಹ ಮುಸಲ್ಮಾನರ ಸ್ವರ್ಗದಲ್ಲಿ ಪ್ರವೇಶ ಪಡೆಯಲು ಇಚ್ಛಿಸುತ್ತಾರೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಇದು ಸಹ ಅಪ್ಪಟ ಸುಳ್ಳಾಗಿರುತ್ತದೆ. ಇಂಜೀಲ್‌ನಲ್ಲಿ ದೈಹಿಕ ಪ್ರತಿಫಲದ ಯಾವ ಸುಳಿವು ಇಲ್ಲ. ನೋಡಿರಿ ಮುಕ್ತಾಯ ಎಷ್ಟೊಂದು ಸ್ಪಷ್ಟವಾಗಿ ಯೇಸುವಿನ ನುಡಿ. ದೈಹಿಕ ಪ್ರತಿಫಲ ಕುರಿತಾಗಿರುವುದನ್ನು ವಿವರಿಸುತ್ತದೆ. ಅದು ಹೀಗಿದೆ. ಯಾರು ಮನೆ ಅಥವಾ ಸಹೋದರ ಅಥವಾ ಸಹೋದರಿ ಅಥವಾ ತಂದೆ ಅಥವಾ ಯಾರು ತಮ್ಮ ಮರಿಮಕ್ಕಳಿಗಾಗಿ ಅಳುತ್ತಾರೋ ಅಥವಾ ಭೂಮಿಯನ್ನು ತನ್ನ ಹೆಸರಿಗೆ ಮೇಲೆ ಬಿಡುವನೋ ಅವನು ಪಾಪವನ್ನು ಪಡೆಯುವನು. (19 ಅಧ್ಯಾಯ ವಚನ 29) ನೋಡಿರಿ. ಇದು ಎಂತಹ ಸ್ಪಷ್ಟವಾದ ಆಜ್ಞೆಯಾಗಿದೆ. ಅದರಲ್ಲಿ ಈ ಸುವಾರ್ತೆಯು ನೀಡಲಾಗಿದೆ. ಕ್ರೈಸ್ತ ಸ್ತ್ರೀಯು ಯೇಸುವಿಗಾಗಿ ಪತಿಯನ್ನು ತ್ಯಜಿಸಿದರೆ ಅಂತ್ಯ ತೀರ್ಮಾನ ದಿನದಂದು ಅವಳಿಗೆ ಒಂದು ನೂರು ಪತಿಯಂದಿರು ಲಭಿಸುವುದು, ದೈಹಿಕ ಅನುಗ್ರಹಗಳ ವಾಗ್ದಾನ ನೀಡುವುದು ಅಲ್ಲಾಹನ ಘನತೆಗೆ ತಕ್ಕುದಲ್ಲ ಎಂದಾಗಿದ್ದರೆ ತಾರೌತಿನಲ್ಲಿ ಎಂದೂ ದೈಹಿಕ ಅನುಗ್ರಹಗಳ ಬಗ್ಗೆ ವಾಗ್ದಾನ ನೀಡಲಾಗುತ್ತಿರಲಿಲ್ಲ. ಯೇಸು ಹೇಳಲಿಲ್ಲವೆ. ನಾನು ಸ್ವರ್ಗದಲ್ಲಿ ದ್ರಾಕ್ಷಿಯ ಶರಬತ್ತು ಕುಡಿಯುವೆನು ಎಂದು. ಯೇಸುವಿನ ನಡೆ ವಿಚಿತ್ರವಲ್ಲವೇ. ಮುಸಲ್ಮಾನ ಸ್ವರ್ಗದಲ್ಲಿ ಪ್ರವೇಶ ಬಯಸುತ್ತಾರೆ. ಅದರಲ್ಲಿ ದೈಹಿಕ ಅನುಗ್ರಹಗಳೂ ಇವೆ. ಮತ್ತೊಂದು ವಿಚಿತ್ರದಾಯಕವೆಂದರೆ ದೈಹಿಕ ಅನುಗ್ರಹಗಳ ಮೇಲೆಯೇ ಮೋಹಿತರಾದರು. ದೇವದರ್ಶನದ ಬಗ್ಗೆ ಪ್ರಸ್ತಾಪಿಸಿಲ್ಲ. ಲಹಾಝುರನಿಂದ ನೀರು ಬೇಡಿದ್ದನ್ನು ಸ್ಮರಿಸಿರಿ. ಯಾವ ಸ್ವರ್ಗದಲ್ಲಿ ನೀರು ಇಲ್ಲ. ಅದರಲ್ಲಿ ನೀರಿನ ವಿವರ "ದರ್ಝೂರ್‌ಗೋರ ಹಾಪಿರ್ಝ್ ನಬಾಶದ್" ನುಡಿದಂತಾಗಿರುತ್ತದೆ. ಸ್ವರ್ಗದಲ್ಲಿರುವವರು ದೇವತೆಯಂತಾಗುವರು ಎಂಬ ಮಾತು ಸತ್ಯವಾಗಿದೆ. ಆದರೆ ತನ್ನ ವಿಶಿಷ್ಠ ಗುಣಗಳನ್ನು ಪರಿವರ್ತಿಸಿಕೊಂಡು ನಿಜವಾಗಿಯೂ ದೇವದೂತರಾಗುವರು. ಮತ್ತು ಮಾನವ ಗುಣಗಳನ್ನು ಬಿಡುವರು ಎಂದು ಎಲ್ಲಿ ಸಾಬೀತಾಗಿದೆ. ಹೌದು ಸ್ವರ್ಗದಲ್ಲಿ ಲೌಕಿಕ ರೀತಿಯಲ್ಲಿ ವಿವಾಹವಾಗುವುದಿಲ್ಲ ಎಂಬ ಮಾತೇನೋ ಸರಿಯಾಗಿದೆ. ಆದರೆ ಸ್ವರ್ಗದಲ್ಲಿ ದೈಹಿಕ ಸುಖಗಳಂತೂ ಇರುವುದು ಅದನ್ನು ಯೇಸು ಸಹ ಅಲ್ಲಗಳೆಯಲಿಲ್ಲ. ದ್ರಾಕ್ಷಿಯ ಶರಬತ್ತು ಕುಡಿಯುವ ಆಸೆಯಲ್ಲಿಯೇ ಅಗಲಿ ಹೋದನು. ತೌರೌತಿನಿಂದ ಸಾಬೀತಾಗಿದೆ. ದೈಹಿಕ ಪ್ರತಿಫಲ ಸಹ ದೇವನ ಗುಣವಾಗಿದೆ. ಹೀಗಿರುವಾಗ ಪರಿವರ್ತನೆಗೊಳ್ಳದ ದೇವನು ಹೇಗೆ ತಾನೆ ತನ್ನ ಗುಣಗಳನ್ನು ಬದಲಿಸುವನು. (ನೂರುಲ್ ಖುರ್‌ಆನ್, ಸಂಖ್ಯೆ–2, ಸಂಪುಟ–9, ಪುಟ–142)

**ಮಾನವನ ಆಧ್ಯಾತ್ಮಿಕ ಶಕ್ತಿಗಳು ದೇಹದ ಸಂಗವಿಲ್ಲದೆ ಎಂದೂ ಬೆಳವಣಿಗೆ ಹೊಂದುವುದಿಲ್ಲ.**

ಈ ಕೆಳಗೆ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ಅಧ್ಯಾಪನೆಗಳನ್ನು ಪ್ರಸುತಪಡಿಸುತ್ತೇವೆ. ಅದರಿಂದ ತಿಳಿದುಬರುವುದು. ಸ್ವರ್ಗದಲ್ಲಿ ಕೇವಲ ಆತ್ಮವಿರುವುದಿಲ್ಲ. ಬದಲು ಶರೀರವು ಸಹ ಅವಶ್ಯಕವಾಗಿರುತ್ತದೆ. ಅವರು ಅರುಹಿದರು. ಖುರ್‌ಆನ್‌ನಿಂದ ಜೀವಿಸಲ್ಪಡುವುದು ಸಾಬೀತಾಗಿದೆ. ಆದುದರಿಂದ ಒಪ್ಪಬೇಕಾಗುತ್ತದೆ. ಯಾವುದೋ ಇನ್ನೊಂದು ಶರೀರದ ಮಾಧ್ಯಮದಿಂದ ಅದನ್ನು ನಾವು ನೋಡಲಾಗುವುದಿಲ್ಲ. ಮನುಷ್ಯನಿಗೆ ಜೀವ ಕೊಡಲಾಗುತ್ತದೆ. ಬಹುಶಃ ಅದೇ ಶರೀರ ಈ ಶರೀರದ ಸೂಕ್ಷ್ಮ ಅಣುವಿನಿಂದ ತಯಾರಾಗುತ್ತದೆ. ಆಗ ಶರೀರ ದೊರಕಿದ ಮೇಲೆ ಮಾನವ ಗುಣಗಳು ಚಾಲ್ತಿಗೆ ಬರುತ್ತವೆ. ಈ ಎರಡನೆಯ ಶರೀರ ಮೊದಲಿನ ಶರೀರಕ್ಕಿಂತ ಅತ್ಯಂತ ಸೂಕ್ಷ್ಮವಾಗಿರುತ್ತದೆ. ಆದುದರಿಂದ ಅದರ ಮೇಲೆ ದಿವ್ಯ ಸ್ವಪ್ನಗಳ ಬಾಗಿಲು ಅತ್ಯಂತ ವಿಶಾಲ ರೀತಿಯಲ್ಲಿ ತೆರೆಯಲ್ಪಡುತ್ತದೆ ಮತ್ತು ಪರಲೋಕದ ಎಲ್ಲಾ ಯಥಾರ್ಥತೆಗಳು ಇದ್ದ ಹಾಗೆ (ಕಮಾಹಿಯ) ಗೋಚರಿಸತೊಡಗುತ್ತವೆ. ಆಗ ತಪ್ಪಿತಸ್ಥರನ್ನು ದೈಹಕ ಶಿಕ್ಷೆಗಳಲ್ಲದೇ ಒಂದು ನಿರೀಕ್ಷೆಯ ಶಿಕ್ಷೆಯು ದೊರೆಯುತ್ತದೆ. ಅಂತೂ ಈ ತತ್ವ ಸವ್ಸಮ್ಮತವಾಗಿ ಇಸ್ಲಾಮಿನಲ್ಲಿದೆ. ಗೋರಿಯ ಶಿಕ್ಷೆ ಅಥವಾ ಸುಖ ಸಹ ಶರೀರದ ಮಾಧ್ಯಮದಿಂದಲೆ ದೊರಕುತ್ತದೆ. ವಿವೇಕವು ಸಹ ಆ ಮಾತನ್ನು ಒಪ್ಪುತ್ತದೆ. ಏಕೆಂದರೆ ನಿರಂತರದ ಅನುಭವ ಈ ತೀರ್ಪು ನೀಡುತ್ತದೆ. ಮಾನವನ ಆಧ್ಯಾತ್ಮಿ ಶಕ್ತಿಗಳು ದೇಹದ ಸಂಗವಿಲ್ಲದೇ ಎಂದೂ ಪ್ರಕಟಗೊಳ್ಳುವುದಿಲ್ಲ. ಕ್ರೈಸ್ತರು ಈ ಮಾತಂತೂ ಒಪ್ಪುತ್ತಾರೆ. ಗೋರಿಯ ಶಿಕ್ಷೆ ಶರೀರದ ಮಾಧ್ಯಮದಿಂದಾಗುತ್ತದೆ ಎಂದು. ಆದರೆ ಸ್ವರ್ಗೀಯ ಸುಖವನ್ನು ಶರೀರದೊಂದಿಗೆ ಒಪ್ಪುವುದಿಲ್ಲ. ಅಂದ ಹಾಗೆ ಇದು ಅವರ ಅಪ್ಪಟ ತಪ್ಪು ಗ್ರಹಿಕೆಯಾಗಿದೆ. ಮತ್ತು ಆ ತಪ್ಪನ್ನು ಮತ್ತು ನ್ಯೂನತೆಯನ್ನು ಇಂಜೀಲಿಗೆ ಅರ್ಪಿಸುತ್ತಾರೆ. ಅದೇ ಈ ತಪ್ಪು ಗ್ರಹಿಕೆಗೆ ಕಾರಣವಾಯಿತು.
(ಕಿತಾಬುಲ್ ಬರಿಯ್ಯ, ರೂಹಾನಿ ಖಝಾಈನ್, ಸಂಪುಟ–13, ಪುಟ–71)

**ಮೆರಾಜಿನ ರಾತ್ರಿ ಹಝ್ರತ್ ರಸೂಲುಲ್ಲಾಹ್(ಸ) ಪ್ರವಾದಿಗಳು ಕೇವಲ ಆತ್ಮಗಳನ್ನು ಸಂದರ್ಶಿಸಲಿಲ್ಲ. ಅವರ ದೇಹಗಳನ್ನು ಕಂಡಿದ್ದಾರೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅರುಹಿದರು. ಸ್ವರ್ಗ ಪ್ರವೇಶಿಸಲು ಶರೀರವು ಅವಶ್ಯಕವಾಗಿದೆ. ಆದರೆ ಇದು ಶರೀರ ಅವಶ್ಯಕವಲ್ಲ. ಬದಲು ಅಲ್ಲಿ ನಶ್ವರ ಶರೀರ ಬೇಕಾಗಿಲ್ಲ. ಏಕೆಂದರೆ ಸ್ವರ್ಗದ ಹಣ್ಣು ಹಂಪಲುಗಳು ಸಹ ನಶ್ವರವಾಗಿರುವುದಿಲ್ಲ. ಬದಲು ಅದೊಂದು ಆಧುನಿಕ ರೀತಿಯ ಸೃಷ್ಟಿಯಾಗಿರುತ್ತದೆ. ಆದುದರಿಂದ ಶರೀರವು ಸಹ ಆಧುನಿಕವಾಗಿ ಸೃಷ್ಟಿಸಲಾಗುವುದು. ಅದು ಮೊದಲ ಶರೀರಕ್ಕಿಂತ ಭಿನ್ನವಾಗಿರುತ್ತದೆ. ಆದರೆ ಸತ್ಯವಿಶ್ವಾಸಿಗಳಿಗಾಗಿ ಮರಣದ ನಂತರ ಶರೀರದ ಸಂಗ ದೊರೆಯುವುದು ಅವಶ್ಯವಾಗಿರುತ್ತದೆ. ಅದರ ಮೇಲೆ ಕೇವಲ ಸ್ವರ್ಗದ ಪದ ಲಗತ್ತಿಸುವುದಿಲ್ಲ. ಬದಲು ಮೆಹರ್‌ನ ರಾತ್ರಿ ಹಝ್ರತ್ ರಸೂಲುಲ್ಲಾಹ್(ಸ) ಪ್ರವಾದಿಗಳ ಕೇವಲ ಆತ್ಮಗಳನ್ನು ಸಂದರ್ಶಿಸಲಿಲ್ಲ. ಬದಲು ದೇಹಗಳನ್ನು ಸಹ ಕಂಡಿದ್ದಾರೆ. ಹಝ್ರತ್ ಈಸಾ(ಅ) ರವರ ಶರೀರ ಸಹ ಅದಕ್ಕಿಂತ ಬಿನ್ನವಾಗಿ ಏನೂ ಇರಲಿಲ್ಲ. (ಝಮೀಮ ಬರಾಹೀನ್ ಅಹ್ಮದೀಯ, ಭಾಗ–5, ರೂಹಾನಿ ಖಝಾಈನ್, ಸಂಘುಟ–21, ಪಉಟ–387 ಅಡಿಟಿಪ್ಪಣಿ)

ಮುಂದೆ ಇನ್‌ಶಾಅಲ್ಲಾಹ್. ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥ್ವಾನ ಕುರಿತು ನಾವು ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**
**Love for All, Hatred for None**
**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

## ತಂದೆಯ ಆಶೀರ್ವಾದ (ಪ್ರಾರ್ಥನೆಗಳಿಂದ) ದಿಂದ ಲಾಭಾನ್ವಿತರಾಗಿರಿ ಮತ್ತು ಅವರ ಶಾಪಗಳಿಂದ ಉಳಿದುಕೊಳ್ಳಿರಿ.

**ವಿವಾಹನಂತರ ವಖ್‌ಫೇ ನೌ ಮಹಿಳೆಯ ಪ್ರಮುಖ ಕರ್ತವ್ಯವೇನೆಂದರೆ ತಮ್ಮ ಮಕ್ಕಳನ್ನು ಅಲ್ಲಾಹನೊಂದಿಗೆ ಸಂಬಂಧವಿರಿಸುವಂತಹ ರೀತಿಯಲ್ಲಿ ತರಬೇತಿ ನೀಡುವುದಾಗಿರಬೇಕು. ತಮ್ಮ ಹೊಸ ಪೀಳಿಗೆಯನ್ನು ಅಹ್ಮದಿಯತ್ತಿನ ಮೇಲೆ ದೃಢವಾಗಿ ನಿಲ್ಲುವಂತೆ ಮಾಡಬೇಕು ಮತ್ತು ಅಲ್ಲಾಹನೊಡನೆ ಅವರು ಸಂಬಂಧ ಹೊಂದುವಂತೆ ಮಾಡಬೇಕು.**

**ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರೊಡನೆ ಕೇಳಲಾದ ಪ್ರಮುಖ ಪ್ರಶ್ನೆಗಳ ವಿವೇಕಪೂರ್ಣ ಉತ್ತರಗಳು**

**ಸೂಚನೆ:–** ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ವಿವಿಧ ಸಂದರ್ಭಗಳಲ್ಲಿ ತನ್ನ ಪತ್ರಗಳಲ್ಲಿ ಮತ್ತು MTA ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಕ ಸಮಸ್ಯೆಗಳ ಕುರಿತು ನೀಡಲಾದ ನಿರ್ದೇಶನಗಳು. ಅವುಗಳಲ್ಲಿ ಕೆಲವು ಓದುಗರ ಹಿತದೃಷ್ಟಿಯಿಂದ ಅಲ್–ಫಝ್ಲ್ International ನ ಕೃಪೆಯಿಂದ ಪ್ರಕಟಿಸಲಾಗುತ್ತದೆ.

*(ಬದರ್ ಸಂಚಿಕೆ–44ರ ಉಳಿದ ಭಾಗ ಮುಂದುವರಿಸಲಾಗಿದೆ)*

**ಪ್ರಶ್ನೆ: ನಝಾರತ್ ಇಸ್ಲಾಹ್ ವ ಇರ್ಷಾದ್ ಮರ್ಕಝೀಯ ರಬ್ವಾ, ಹದೀಸು ಗ್ರಂಥಗಳಲ್ಲಿ ವರದಿಯಾದ ತಂದೆಯ ತನ್ನ ಸಂತಾನದ ಪ್ರತಿ ಮಾಡುವ ದುಆ ಅಥವಾ ಸಂತಾನದ ವಿರುದ್ಧ ಮಾಡುವ ಶಾಪ (ಬದ್. ದುಆ) ಸ್ವೀಕಾರಗೊಳ್ಳುವ ಕುರಿತು ಬಂದಿರುವ ವರದಿಗಳು ಮತ್ತು ಅದರ ಅರಬಿ ನಿಘಂಟಿನ ಪ್ರಕಾರ ವಿಶ್ಲೇಷಣೆ ಬಯಸಿ ಹುಝೂರ್ ಅನ್ವರ್ ಅವರ ಮಾರ್ಗದರ್ಶನ ಬಯಸಿದರು. ಅದರಲ್ಲಿ ಯಾವ ವರದಿಯನ್ನು ಮತ್ತು ಯಾವ ಭಾಷಾಂತರವನ್ನು ಒಪ್ಪಬೇಕು? ಹುಝೂರೆ ಅನ್ವರ್ ತನ್ನ ಪತ್ರ ದಿನಾಂಕ: 25 ಫೆಬ್ರವರಿ 2015 ರಲ್ಲಿ ಈ ಪ್ರಶ್ನೆಗೆ ಕೆಳಗಿನ ಉತ್ತರ ನೀಡಿದರು.**

**ಉತ್ತರ:** ತಂದೆಯು ತನ್ನ ಸಂತಾನಕ್ಕಾಗಿ ದುಆ" ಎಂದು ತರ್ಜುಮೆ ಮಾಡಿದರೂ ಹದೀಸಿನ ತಾತ್ಪರ್ಯ ಸ್ಪಷ್ಟಗೊಳ್ಳುತ್ತದೆ. ಆದರೆ ಹದೀಸು ಗ್ರಂಥಗಳಲ್ಲಿ ವರದಿಯಾದ ಎರಡು ರೀತಿಯ ಹದೀಸುಗಳ ಪ್ರಕಾರ ತಮ್ಮ ತಮ್ಮ ಸ್ಥಾನದಲ್ಲಿ ಸರಿಯಾಗಿವೆ. ಮತ್ತು ನಮಗೆ ಮಾರ್ಗದರ್ಶನವಾಗಿವೆ. ಎರಡು ಹದೀಸುಗಳನ್ನು ಮುಂದಿಟ್ಟು ನೋಡಿದರೆ ವಿಷಯ ಹೀಗಾಗವುದು. ಯಾವ ವ್ಯಕ್ತಿಯ ದುಆ ಸ್ವೀಕೃತಿ ಹೊಂದುವುದೋ ಅವನ ಶಾಪ (ಬದ್–ದುಆ) ಸಹ ಸ್ವೀಕೃತವಾಗುತ್ತದೆ. ಅಲ್ಲಾಹನು ದುಆ ಸ್ವೀಕರಿಸುವೆನು, ಶಾಪ ಸ್ವೀಕರಿಸುವುದಿಲ್ಲ ಎಂದೇನು ಹೇಳಿಲ್ಲ.

ತಂದೆಗೆ ಅಲ್ಲಾಹನು ಆ ಸ್ಥಾನವನ್ನು ನೀಡಿದ್ದಾನೆ, ಈ ನೆಲೆಯಲ್ಲಿ ಅಲ್ಲಾಹನು ಅವನ ಪ್ರಾರ್ಥನೆಗಳನ್ನು ಸಹ ಸ್ವೀಕರಿಸುತ್ತಾನೆ ಮತ್ತು ಶಾಪ ಸಹ ಸ್ವೀಕರಿಸುತ್ತಾನೆ. ಅದಕ್ಕಾಗಿಯೇ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ವಿಶೇಷವಾಗಿ ಉಲ್ಲೇಖಿಸಿದನು.

**ವ ಖಝಾ ರಬ್ಬುಕ ಅಲ್ಲಾ ತಅ್‌ಬುದು ಇಲ್ಲಾ ಇಯ್ಯಾಹು ವಬಿಲ್ ವಾಲಿದೈನಿ ಇಹ್ಸಾನ, ಇಮ್ಮಾ ಯಬ್ಲುಗನ್ನ ಇಂದಕಲ್ ಕಿಬರ ಅಹದುಹುಮಾ ಔ ಕಿಲಾಹುಮಾ ಫಲಾ ತಖುಲ್ಲಹುಮಾ ಉಫ್ಫ್ ವಲಾ ತನ್‌ಹರ್‌ಹುಮಾ ವ ಖುಲ್ಲಹುಮಾ ಖೌಲನ್ ಕರೀಮ. ವಖ್‌ಫಿಝ್ಲಹುಮಾ ಜನಾಹಝ್ಝುಲ್ಲಿ ಮಿನರ್‌ರಹ್‌ಮತಿ ವಖುರ್ ರಬ್ಬಿರ್ ಹಮ್‌ಹುಮಾ ಕಮಾ ರಬ್ಬಯ್ಯಾನಿ ಸಗೀರ. (ಬನೀ ಈಸ್ರಾಯಿಲ್–24–25).**

"ನಿನ್ನ ಪ್ರಭೂ ಆಜ್ಞಾಪಿಸುತ್ತಾನೆ: "ಅವನ (ಅಲ್ಲಾಹನ) ಹೊರತು ಬೇರೆ ಯಾರನ್ನು ಆರಾಧಿಸಬೇಡ. ಮಾತಪಿತರೊಡನೆ ಉತ್ತಮವಾಗಿ ವರ್ತಿಸು. ಅವರಲ್ಲಿ ಒಬ್ಬರು ಅಥವಾ ಇಬ್ಬರು ನಿನ್ನ ಬಳಿ ವೃದ್ಧಾಪ್ಯ ಪಡೆದರೆ, ನೀನು ಅವರೊಡನೆ ನಿಂದನೆಯ ಮಾತನ್ನು ಆಡಬಾರದು. ನೀನು ಅವರನ್ನು ಗದರಿಸಿ ಮಾತನಾಡಬಾರದು. ಅವರಿಬ್ಬರೊಡನೆ ನೀನು ಸೌಮ್ಯವಾಗಿಯೂ ಆದರದಿಂದಲೂ ಮಾತನಾಡು. ಕರುಣೆಯಿಂದ ಕಂಡಿದವನಾಗಿ ನೀನು ಅವರಿಗೆ ವಿನಯದ ಬಾಹು ತಗ್ಗಿಸಿಕೊಂಡು ಹಾಗೂ ನನ್ನ ಪ್ರಭೂ ಅವರೀರ್ವರೂ ನನ್ನ ಬಾಲ್ಯ ಕಾಲದಲ್ಲಿ ನನ್ನನ್ನು ಸಾಕಿ ಸಲಹಿದಂತೆ ನೀನು ಸಹ ಅವರಿಗೆ ಕರುಣೆದೋರು ಎಂದು ಪ್ರಾರ್ಥಿಸು."

ಅಂದ ಹಾಗೆ ಈ ಹದೀಸುಗಳಲ್ಲಿ ಹುಝೂರ್(ಸ) ನಮಗೆ ಉಪದೇಶಿಸಿದ್ದೇನೆಂದರೆ ತಂದೆಯ ದುಆ (ಪ್ರಾರ್ಥನೆಗಳಿಂದ) ಪ್ರಯೋಜನ ಪಡೆಯುತ್ತೀರಿ ಮತ್ತು ಅವರ ಶಾಪದಿಂದ ಉಳಿಯಿರಿ.

**ಪ್ರಶ್ನೆ:– ಗುಲ್ಶನ್ ವಖ್ಫೆ ನೌ ಲಜ್ನ, ನಾಸಿರಾತ್ ಮೆಲ್ಬೋರ್ನ್ (ಆಸ್ಟ್ರೇಲಿಯಾ) ದಿನಾಂಕ: 12 ಅಕ್ಟೋಬರ್ 2013 ರಲ್ಲಿ ಒರ್ವ ಬಾಲಕಿ ಹುಝೂರ್‌ರವರನ್ನು ಕೇಳಿದರು. ನಮಗೆ ಅಲ್ಲಾಹನು ಏಕೆ ಕಾಣುವುದಿಲ್ಲ? ಆಗ ಹುಝೂರ್ ಕೆಳಗಿನ ಉತ್ತರವನ್ನು ನೀಡಿದರು.**

**ಉತ್ತರ:** ಅಲ್ಲಾಹನು ನಮಗೆ ಕಾಣಲಾಗದಂತಹ ಆಸ್ತಿತ್ವ ಹೊಂದಿದ್ದಾನೆ. (ಹುಝೂರೆ ಅನ್ವರ್ ಪ್ರಶ್ನೆ ಕೇಳಿದ ಬಾಲಕಿಯನ್ನು ಸಂಬೋಧಿಸುತ್ತಾ ಮಾಳಿಗೆಯ ಮೇಲಿನ ಬಲ್ಬನ್ನು ತೋರಿಸುತ್ತಾ ಹೇಳಿದರು) ನಿಮಗೆ ಈ ಬಲ್ಬ್ ಕಾಣುತ್ತಿದೆ ಅಲ್ಲವೆ? ಮತ್ತು ಬಲ್ಬ್‌ನ ಪ್ರಕಾಶ (ಹುಝೂರೆ ಅನ್ವರ್ ತನ್ನ ಮುಂದೆ ಇದ್ದ ಮೇಜಿನ ಕಡೆ ಸಂಕೇತಿಸುತ್ತಾ ಹೇಳಿದರು) ಇಲ್ಲಿ ಬೀಳುತ್ತಿರುವುದನ್ನು ಕಾಣುತ್ತಿದೆಯೇ. ಇದು ಹೀಗೆ ನಡೆದುಕೊಂಡು ಬಂದಿದೆ? ಈ ಪ್ರಕಾರ ನಿಮಗೆ ಅಲ್ಲಿಂದ ಇಲ್ಲಿಯವರೆಗೆ ನಡೆಯುವುದನ್ನು ಕಾಣುತ್ತದೆಯೇ? (ಹುಝೂರೆ ಅನ್ವರ್ ಮತ್ತೊಮ್ಮೆ ಆ ಬಾಲಕಿಗೆ ಕೇಳಿದರು). ಅದು ಬಲ್ಬ್‌ನ ಪ್ರಕಾಶವಾಗಿದೆ. ಅದು ಬೆಳಗುತ್ತಿದೆ. ಮತ್ತು ಅದರ ಬೆಳಕು ಇಲ್ಲಿ ಅಂದರೆ ಮೇಜಿನ ಮೇಲೆ ಬಿದ್ದಿದೆ. ಆದರೆ ಅದರ ನಡುವೆ ಇರುವ ದೂರದಲ್ಲಿ ಯಾವ ವಸ್ತುವು ಕಾಣುತ್ತಿಲ್ಲ. ಅದು ಅಲ್ಲಿಂದ ಹೊರಟು ಇಲ್ಲಿ ತಲುಪಿದೆ. ಮಧ್ಯದಲ್ಲಿ ಕಾಣುತ್ತಿದೆಯೇ? (ಬಾಲಕಿ ಹೇಳಿದಳು ಕಾಣುತ್ತಿಲ್ಲ, ಆಗ ಹುಝೂರ್ ಹೇಳಿದರು) ಕಾಣುತಿಲ್ಲವಲ್ಲ? ಹಾಗಾದರೆ ಅಲ್ಲಾಹನಂತೂ ಅದಕ್ಕಿಂತ ಹೆಚ್ಚು ಪ್ರಕಾಶ ಹೊಂದಿದವನಾಗಿದ್ದಾನೆ. ಮತ್ತು ಆ ಪ್ರಕಾಶ ಎಂತಹ ಪ್ರಕಾಶವಾಗಿದೆ ಎಂದರೆ ಅದು ಕಾಣುವುದಿಲ್ಲ. ಹೌದು ಅಲ್ಲಾಹನ ಶಕ್ತಿ ಸಾಮರ್ಥ್ಯಗಳು ಕಾಣುತ್ತಿವೆ. ನೀವು ದುಆ ಮಾಡಿರಿ, ನಿಮ್ಮ ದುಆ ಎಂದಾದರೂ ಸ್ವೀಕೃತಗೊಂಡಿದೆಯೇ? ಬಾಲಕಿ ಹೇಳಿದಳು, ಹೌದು ಸ್ವೀಕೃತಗೊಂಡಿದೆ. ಹುಝೂರ್ ಹೇಳಿದರು ಅಂದ ಹಾಗೆ ಅದೇ ಅಲ್ಲಾಹನನ್ನು ಕಂಡ ಹಾಗೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ. ಭೂಮಿಯು ಒಂದು **Planet** ಗ್ರಹ ಆಗಿದೆ, ಭೂಮಂಡಲವಾಗಿದೆ, ಮತ್ತೆ ಇಲ್ಲಿ ಸೃಷ್ಟಿಯಿದೆ. ಸಸ್ಯಗಳಿವೆ, **Vegetation** ಯಿದೆ. ಆಸ್ಟ್ರೇಲಿಯಾ ಅಂತೂ **Flora & Fauna** ಗೋಸ್ಕರ ಪ್ರಸಿದ್ಧ ಸ್ಥಳ ಎನ್ನಲಾಗುತ್ತದೆ. ಇವೆಲ್ಲರ ಸೃಷ್ಟಿಕರ್ತ ಅಲ್ಲಾಹನಾಗಿದ್ದಾನೆ. ಎಲ್ಲ ವಸ್ತುಗಳನ್ನು ವೀಕ್ಷಿಸಿರಿ. ಒಂದು plant (ಸಸ್ಯ) ಇಲ್ಲಿ ಬೆಳೆಯುತ್ತದೆ. ಹಾಗೆಯೇ ಹೇಳುತ್ತಾರೆ. Plant ಗೆ ಎಲೆಗಳಿರದಿದ್ದರೆ Cholorophyll ಆ plantಗೋಸ್ಕರ ಜೀವನ ಒದಗಿಸುತ್ತದೆ. ಎಲೆಗಳು ಅದರಲ್ಲಿ ತಮ್ಮ ಪಾತ್ರ ವಹಿಸುತ್ತವೆ. ಆದರೆ ನಾನು ಇಲ್ಲಿ ಇಂತಹ ಸಸ್ಯಗಳು ಕಂಡಿದ್ದೇನೆ. ಅದು ಕೇವಲ ಒಂದು **stick ಮತ್ತು stem** ಆಗಿವೆ. ಅವೇ ಎಲೆಗಳ ಪಾತ್ರ ಸಹ ನಿರ್ವಹಿಸುತ್ತಿವೆ. ಅದರ ಶಿರದ ಮೇಲೆ ಒಂದು ಸುಂದರವಾದ ದೊಡ್ಡ ಬಣ್ಣ ಬಣ್ಣದ (colourful) ರೀತಿಯ ಪುಷ್ಪವಿದೆ. ಇದು ಸಹ ಒಂದು ಅಲ್ಲಾಹನ ಕಾರ್ಯವಾಗಿದೆ. ಎಲ್ಲಾ ವಸ್ತುಗಳನ್ನು ಅಲ್ಲಾಹನೇ ಸೃಷ್ಟಿಸಿದ್ದಾನೆ. ಅದನ್ನು ನೋಡಿರಿ, ಯೋಚಿಸಿರಿ ಆಗ ಅಲ್ಲೇ ಅಲ್ಲಾಹನು ನಿಮಗೆ ಕಾಣುವನು.

**ಪ್ರಶ್ನೆ: ಗುಲ್ಶನ್ ವಖ್ಫೆ ನೌ ಲಜ್ನ, ನಾಸಿರಾತ್ ಮೆಲ್ಬೋರ್ನ್ ಆಸ್ಟ್ರೇಲಿಯಾ ದಿನಾಂಕ: 12 ಅಕ್ಟೋಬರ್ 2013 ರಂದು ಲಜ್ನಾ ಇಮಾಉಲ್ಲಾದ ಸದಸ್ಯೆಯೊಬ್ಬರು ಹುಝೂರರೊಡನೆ ಕೇಳಿದರು. ವಾಖಿಫಾತೆ ಲಜ್ನಾ ಒಬ್ಬಳು ವಿವಾಹವಾಗಿ ಮನೆಗೆ ಬಂದರೆ, ಕುಟುಂಬ ಮತ್ತು ಮಕ್ಕಳ ಹೊಣೆಗಾರಿಕೆ ಬಿದ್ದರೆ ಆ ಸಮಯ ನಾವು ವಾಖಿಫಾತೆ ನೌ ಆಗುವ ಪಾತ್ರ ಹೇಗೆ ನಿಭಾಯಿಸಬಹುದು? ಹುಝೂರೆ ಅನ್ವರ್ ಅದರ ಉತ್ತರ ಈ ಕೆಳಗಿನಂತೆ ನೀಡಿದರು.**

ಉತ್ತರ:– ವಖ್ಫೆ ನೌ ನ ಸರಿಯಾದ ಪಾತ್ರ ಪಾಲಿಸಲು ಮೊದಲು ಐದು ಹೊತ್ತಿನ ನಮಾಝುಗಳನ್ನು ಸರಿಯಾಗಿ ನಿರ್ವಹಿಸಿರಿ. ತಹಝ್ಝುದ್ ನಿರ್ವಹಿಸಬಹುದಾದರೆ ನಿರ್ವಹಿಸಿರಿ. ಪವಿತ್ರ ಖುರ್‌ಆನ್ ಪಠಿಸಿರಿ. ಅದರ ತರ್ಜುಮೆ ಓದಿರಿ. ಲಜ್ನಾದ ಯಾವುದೇ ಕಾರ್ಯ ನಿಮ್ಮ ಪಾಲಿಗೆ ಬಂದರೆ ಸಾಧ್ಯವಾದಷ್ಟು ಮಟ್ಟಿಗೆ ಮಾಡಿರಿ. ಮತ್ತೆ ಎಲ್ಲದಕ್ಕಿಂತ ಮುಖ್ಯ ಕರ್ತವ್ಯವೆಂದರೆ ಮಕ್ಕಳ ತರಬೇತಿಯಾಗಿದೆ. ಅವರಿಗೆ ಅಲ್ಲಾಹನೊಂದಿಗೆ ಸಂಬಂಧ ಕಲ್ಪಿಸುವ ರೀತಿಯಲ್ಲಿ ತರಬೇತಿ ನೀಡಿರಿ. ಪತಿಗೆ ಮನವರಿಕೆ ಮಾಡಿಕೊಡಿ. ನಾನು ವಖ್ಫೆ ನೌ ಆಗಿರುತ್ತೇನೆ. ನನ್ನ ಕೆಲಸವೇನೆಂದರೆ ತನ್ನನ್ನು ತರಬೇತುಪಡಿಸುವುದು, ತನ್ನ ಮನೆಯ ತರಬೇತಿ ನಿರ್ವಹಿಸುವುದು ಮತ್ತು ತನ್ನ ಮಕ್ಕಳನ್ನು ತರಬೇತಿಗೊಳಿಸುವುದು. ಆದುದರಿಂದ ನೀವು ನನ್ನ ಈ ಕಾರ್ಯದಲ್ಲಿ ನೆರವು ನೀಡಿರಿ. ಏಕೆಂದರೆ ತಂದೆಯಾದವನು ತನ್ನ ಪಾತ್ರ ವಹಿಸಲಿಲ್ಲ ಎಂದಾದರೆ ತರಬೇತಿ ಸರಿ ಆಗಲಾರದು. ಪ್ರಮುಖ ಜವಾಬ್ಧಾರಿಯು ಮನೆಯ ಜವಾಬ್ಧಾರಿಯಾಗಿದೆ. ನಿಮಗೂ ಅದರಲ್ಲಿ ಬಹಳ ಪುಣ್ಯವಿದೆ. ಹದೀಸಿನಲ್ಲಿ ಬರುತ್ತದೆ. ಮಹಿಳೆಯೊಬ್ಬಳು ಹಝ್ರತ್ ರಸೂಲುಲ್ಲಾಹ್(ಸ) ರವರ ಬಳಿಗೆ ಬಂದು ಹೇಳಿದಳು. ನನ್ನ ಪತಿ ಜಿಹಾದಿಗೆ ಹೋಗುತ್ತಾರೆ, ಸಂಪಾದಿಸುತ್ತಾರೆ ಮತ್ತು ಚಂದಾ ಸಹ ಕೊಡುತ್ತಾರೆ, ಪುರುಷರು ಮಾಡುವಂತಹ ಕಾರ್ಯಗಳು ನಾವು ಮನೆಗಳಲ್ಲಿರುವ ಸ್ತ್ರೀಯರು ಮಾಡಲು ಸಾಧ್ಯವಾಗುವುದಿಲ್ಲ. ಹಾಗಾದರೆ ಜಿಹಾದ್ ಮತ್ತು ಚಂದಾ ನೀಡುವ ಪುಣ್ಯ ನಮಗೆ ದೊರೆಯಬಹುದೇ?

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 11 November 2021, Issue No. 45

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

(ಬದರ್ ಸಂಚಿಕೆ 44ರ ವರದಿಯ ಉಳಿದ ಭಾಗ)

**ಕೊಸೋವೋದಿಂದ ಆಗಮಿಸಿದ ತಂಡದೊಂದಿಗೆ ಹುಝೂರ್‌ರವರ ಭೇಟಿ**

* Kosovo ದಿಂದ 17 ಜನರ ಒಳಗೊಂಡ ತಂಡವಿತ್ತು. ಅದರಲ್ಲಿ ಇಬ್ಬರು ಮಹಿಳೆಯರು ಮತ್ತು ಇಬ್ಬರು ಮಕ್ಕಳು ಸಹ ಸೇರಿದ್ದರು. ಹುಝೂರ್ ಅನ್ವರ್ ಸದಸ್ಯರೊಡನೆ ಕೇಳಿದರು. ಯಾರೆಲ್ಲ ಮೊದಲ ಬಾರಿಗೆ ಜಲ್ಸಕ್ಕೆ ಬಂದವರಾಗಿದ್ದೀರಿ ಮತ್ತು ಜಲ್ಸದ ಕುರಿತು ನಿಮ್ಮ ಅಭಿಪ್ರಾಯವೇನು?

* ತಂಡದ ಸದಸ್ಯರೊಬ್ಬರು Agron Binakaj ಸಾಹಿಬ್ ತಮ್ಮ ಭಾವನೆಗಳನ್ನು ವಿವರಿಸುತ್ತಾ ಹೇಳಿದರು. ಹಿಂದಿನ ವರ್ಷಕ್ಕೆ ಹೋಲಿಸಿ ನೋಡಿದರೆ ಈ ವರ್ಷದ ಜಲ್ಸದ ಎಲ್ಲಾ ಏರ್ಪಾಡುಗಳಲ್ಲಿ ಅಸಾಮಾನ್ಯ ವಿಶಾಲತೆ ಮತ್ತು ಬದಲಾವಣೆಗಳು ಆಗಿವೆ. ಮತ್ತು ಎಲ್ಲವೂ ಅತ್ಯುತ್ತಮವಾಗಿವೆ.

* Shaip Zeqira ಸಾಹಿಬ್ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ಈ ಜಲ್ಸದಲ್ಲಿ ಭಾಗವಹಿಸಿ ನಾನು ತುಂಬ ಸಂತುಷ್ಟನಾಗಿದ್ದೇನೆ. ಇದು ನನ್ನ ಜೀವನದ ಅತ್ಯಂತ ಉತ್ತಮ ಮತ್ತು ಹರ್ಷದಾಯಕ ದಿನಗಳಾಗಿದ್ದವು. ಜಲ್ಸದ ಎಲ್ಲ ಏರ್ಪಾಡುಗಳು ಮತ್ತು ಇಲ್ಲಿಯ ಉಪಸ್ಥಿತ ಪ್ರತಿಯೊಬ್ಬ ವ್ಯಕ್ತಿಯೂ ನನ್ನನ್ನು ಪ್ರಭಾವಿತಗೊಳಿಸಿದೆ. ಎಲ್ಲಾ ವ್ಯವಸ್ಥೆಗಳು ಅತ್ಯಂತ ಉತ್ತಮವಾಗಿದ್ದವು. ಮತ್ತು ಅವರು ಹೇಳಿದರು. ನನಗೆ ಒಂದು ಆಧ್ಯಾತ್ಮಿಕ ಸಂತೋಷವೂ ದೊರೆತಿದೆ.

* Shekelqim Bytyci ಸಾಹಿಬ್ ಅವರು ಸ್ಥಳೀಯ ಮುಅಲ್ಲಿಮರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹೇಳುತ್ತಾರೆ. ಕೋಸೋವೋದಲ್ಲಿ ನಮ್ಮ ಜಮಾಅತಿನ ಸಂಖ್ಯೆ ತುಂಬ ಕಡಿಮೆ ಇದೆ. ನಾನು ಮೊದಲ ಬಾರಿಗೆ ಇಲ್ಲಿ ಬಂದು ಇಷ್ಟು ದೊಡ್ಡ ಸಂಖ್ಯೆ ನೋಡಿ ತುಂಬ ಸಂತುಷ್ಟನಾಗಿದ್ದೇನೆ. ಈ ಮಹೋನ್ನತವಾದ ಜಲ್ಸದಲ್ಲಿ ಭಾಗವಹಿಸಿ ನನಗೆ ನಿಜ ಅರ್ಥದಲ್ಲಿ ಭಾಸವಾಗುತ್ತದೆ. ನಾನೂ ಇಸ್ಲಾಮ್ ಅಹ್ಮದಿಯತ್ ಎಂಬ ಅಮೋಘ ಕುಟುಂಬದ ಒಂದು ಭಾಗವಾಗಿದ್ದೇನೆ ಎಂದು ಮತ್ತು ಅವರು ಹೇಳಿದರು. ಹುಝೂರ್(ಅಬಾ) ಅವರ ಭಾಷಣಗಳು ಅತ್ಯಂತ ಅರ್ಥಪೂರ್ಣವಾಗಿದ್ದವು ಮತ್ತು ವಿಶ್ವಾಸವರ್ಧಕವಾಗಿದ್ದವು. ಹುಝೂರ್‌ರ ಭಾಷಣಗಳು ನನ್ನ ಮೇಲೆ ಗಹನವಾದ ಪ್ರಭಾವ ಬೀರಿದೆ. ನಾನು ಈ ಎಲ್ಲಾ ಉತ್ತಮ ವ್ಯವಸ್ಥೆಗೆ ಅಭಿನಂದನೆ ಸಲ್ಲಿಸುತ್ತೇನೆ.

* ತಂಡದಲ್ಲಿ ಭಾಗಿಯಾದ ಮಹಿಳೆಯೋರ್ವರಾದ Rina Zeqiraj ಸಾಹಿಬಾ ಹೇಳುತ್ತಾರೆ. ನಾನು ಮೊದಲ ಬಾರಿಗೆ ಜಲ್ಸದಲ್ಲಿ ಭಾಗವಹಿಸಿದ್ದೇನೆ. ಜಲ್ಸದ ಎಲ್ಲ ಏರ್ಪಾಡುಗಳು ಎಲ್ಲ ಹಂತದಿಂದಲೂ ಪರಿಪೂರ್ಣವಾಗಿದ್ದವು. ಯಾರಾದರೂ ಅಹ್ಮದಿಯಾ ಜಮಾಅತಿನ ಸತ್ಯತೆ ನೋಡಬಯಸುವುದಾದರೆ ಇಲ್ಲಿ ಜಲ್ಸಕ್ಕೆ ಬರಬೇಕು ಮತ್ತು ಸ್ವತಃ ತಮ್ಮ ಕಣ್ಣುಗಳಿಂದ ವೀಕ್ಷಿಸಬಹುದು.

ಆಗ ಹುಝೂರ್ ಹೇಳಿದರು. ನೀವು ತುಂಬ ಒಳ್ಳೆಯ ಸಲಹೆಯನ್ನು ನೀಡಿದ್ದೀರಿ. ಮುಂದುವರೆದು ಅವರು ಕೋಸೋವೋ ಜಮಾಅತಿಗಾಗಿ ವಿಶೇಷ ರೀತಿಯ ಪ್ರಾರ್ಥನೆ ನೋಡಲು ಕೋರಿದರು. ಆಗ ಹುಝೂರ್ ಹೇಳಿದರು. ಇನ್‌ಶಾಅಲ್ಲಾಹ್! ನಾನಂತೂ ಪ್ರತಿ ಜಮಾಅತಿಗೋಸ್ಕರ ದುಆ ಮಾಡುತ್ತೇನೆ. ಅಲ್ಲಾಹನು ನಿಮ್ಮಲ್ಲಿಯೂ ಸಹ ದೊಡ್ಡ ಪ್ರಮಾಣದಲ್ಲಿ ಜಲ್ಸಗಳಾಗುವಂತಹ ವಿಶಾಲತೆ ದಯಪಾಲಿಸಲಿ.

* Alban Zeqiraj ಸಾಹಿಬ್ ಮಿತ್ರರೊಬ್ಬರು ಹುಝೂರ್ ಅನ್ವರ್ ಅವರ ಸೇವೆಯಲ್ಲಿ, ಕೋಸೋವೋ ಜಮಾಅತ್ ವತಿಯಿಂದ ಅಸ್ಸಲಾಮ ಅಲೈಕುಂ ಹೇಳಿದರು. ಆಗ ಹುಝೂರ್ ಪ್ರೀತಿಯಿಂದ ಎಲ್ಲಾ ಕೋಸೋವೋ ಬಾಂಧವರಿಗೆ ವಲೈಕುಂ ಅಸ್ಸಲಾಂ ವ ರಹಮತಲ್ಲಾಹಿ ವ ಬರಕಾತುಹು ಸಂದೇಶ ನೀಡಿದರು.

ಅವರು ಹೇಳಿದರು. ಹಿಂದಿನ ನಾಲ್ಕು ವರ್ಷಗಳಿಂದ ಕೋಸೋವೋದಲ್ಲಿ ಯಾವ ಮುಬಲ್ಲಿಗರು ಇಲ್ಲ. ಹುಝೂರ್‌ರೊಂದಿಗೆ ಅಲ್ಲಿ ಓರ್ವ ಮುಬಲ್ಲಿಗ್ ಬರುವಂತೆ ದುಆ ಮಾಡಲು ಕೋರಿದರು.

ಆಗ ಹುಝೂರ್ ಹೇಳಿದರು. ತಮ್ಮ ದೇಶದ ನೇತಾರರ ಮತ್ತು ಮೌಲ್ವಿಗಳ ಬಗ್ಗೆ ದುಆ ಮಾಡಿರಿ. ಅಲ್ಲಾಹನು ಅವರಿಗೆ ಸದ್ಬುದ್ಧಿ ದಯಪಾಲಿಸಲಿ ಮತ್ತು ಅವರು ಒಡ್ಡಿದ ಅಡಚಣೆಗಳು ದೂರವಾಗಲಿ ಎಂದು.

* ಅನಂತರ ಕೋಸೋವೋ ಜಮಾಅತಿನ ಕಾರ್ಯದರ್ಶಿ ಇಶಾಅತ್ ಮುಹಮ್ಮದ್ ಪೇಸಿ ಸಾಹಿಬ್ ಹೇಳಿದರು. ಹುಝೂರ್ ನನಗೆ ಮತ್ತು ನನ್ನ ಮಿತ್ರರೊಬ್ಬರಾದ Rexhep Hasani ಸಾಹಿಬ್ ಅವರಿಗೆ ಪವಿತ್ರ ಖುರ್‌ಆನ್ ಅಲ್ಬಾನಿಯನ್ ಭಾಷಾಂತರ ಮಾಡುವ ಹೊಣೆಗಾರಿಕೆ ಒಪ್ಪಿಸಿದ್ದಾರೆ. ಅದು ಅಸಾಮಾನ್ಯ ರೀತಿಯ ಕಠಿಣ ಮತ್ತು ಅತ್ಯಂತ ಮುಖ್ಯ ಹೊಣೆಗಾರಿಕೆಯಾಗಿದೆ. ಅದನ್ನು ಅತ್ಯುತ್ತಮ ರೀತಿಯಲ್ಲಿ ನೆರವೇರಿಸಲು ದುಆ ಮಾಡಬೇಕಾಗಿ ಕೋರಿದರು.

ಆಗ ಹುಝೂರ್ ಹೇಳಿದರು. ತುಂಬ ಜಾಗರೂಕರಾಗಿ ಕಾರ್ಯ ನಿರ್ವಹಿಸಬೇಕು. ತುಂಬ ಗಮನವಹಿಸುವ ಕಾರ್ಯವಾಗಿದೆ ಎಂದು ಅನುವಾದದ ಕಾರ್ಯ ಪ್ರಾರಂಭಿಸುತ್ತೀರಿ. ದುಆ ಮಾಡಿಯೇ ಪ್ರಾರಂಭಿಸಬೇಕು ಮತ್ತು ದುಆದೊಂದಿಗೆ ಅಂತ್ಯಗೊಳಿಸಬೇಕು. ಅಲ್ಲಾಹನು ನಿಮಗೆ ಆ ಭಾಗ್ಯ ದಯಪಾಲಿಸಲಿ. ಆಮೀನ್.

* Blert Zeqiraj ಸಾಹಿಬ್ ಮಿತ್ರರೊಬ್ಬರು ಹೇಳುತ್ತಾರೆ. ಕೋಸೋವೋ ಜಮಾಅತಿ ಕೆಲ ಬಾಂಧವರ ಬಯಕೆ ಖಾನೆಕಅ್ಬದ ಝಿಯಾರತ್ ಮಾಡಬೇಕೆಂದಿದೆ. ಅವರ ಭಾಗ್ಯ ಪಡೆಯಲು ಹುಝೂರ್‌ರಿಗೆ ದುಆ ಮಾಡಲು ವಿನಂತಿಸಿಕೊಂಡರು.

ಆಗ ಹುಝೂರ್ ಹೇಳಿದರು. ಅಲ್ಲಾಹನು ಆ ಭಾಗ್ಯ ದಯಪಾಲಿಸಲಿ. ಮಿತ್ರರೊಬ್ಬರು Ilirian ibrahimi ಸಾಹಿಬ್ ಹಝುರತ್ ಅಖದಸ್ ಮಸೀಹ್ ಮೌಊದ್(ಅ) ಜಲ್ಸಕ್ಕೆ ಆಗಮಿಸುವವರಿಗೆ ಯಾವೆಲ್ಲ ದುಆ ಮಾಡುತ್ತಿದ್ದರೋ ಅವೆಲ್ಲ ಕೋಸೋವೋದಿಂದ ಬಂದ ಎಲ್ಲ ಸದಸ್ಯರಿಗೂ ಆ ದುಆ ಸ್ವೀಕಾರವಾಗಲಿ ಎಂದು ಪ್ರಾರ್ಥಿಸಿರಿ.

* ಹುಝೂರ್ ಅನ್ವರ್ (ಅಬಾ) ತಂಡದಲ್ಲಿ ಭಾಗಿಯಾದ ಮಿತ್ರರೊಬ್ಬರಿಗೆ Nezir Balaj ಸಾಹಿಬರ ಕುರಿತು ಕೇಳಿದರು. ಅವರು ಯಾವಾಗನಿಂದ ಅಹ್ಮದಿಯಾಗಿದ್ದಾರೆ? ಆಗ ಅವರು ತಮ್ಮ ಪರಿಚಯ ನೀಡುತ್ತಾ ಹೇಳಿದರು. ನಾನು ಬೈಯತ್ ಮಾಡಿ ಮೂರು ವರ್ಷಗಳಾಗಿವೆ, ಅವರು ಹುಝೂರ್‌ರವರ ಸಮ್ಮುಖದಲ್ಲಿ ಅಲ್ಲಾಹನು ನಮಗೆ ಸ್ವೀಕಾರಾರ್ಹ ಧರ್ಮ ಸೇವೆಗಳನ್ನು ಮಾಡುವ ಭಾಗ್ಯ ದಯಪಾಲಿಸಲೆಂದು ಪ್ರಾರ್ಥಿಸಲು ಕೋರಿದರು ಮತ್ತು ಕೋಸೋವೋ ಜಮಾಅತಿನ ಅಭಿವೃದ್ಧಿಯಲ್ಲಿ ಸಕಾರಾತ್ಮಕ ಪಾತ್ರ ನಿರ್ವಹಿಸುವ ಭಾಗ್ಯಕ್ಕಾಗಿ ದುಆ ಮಾಡಲು ವಿನಂತಿಸಿಕೊಂಡರು.

ಕೋಸೋವೋ ತಂಡದೊಂದಿಗೆ ಹುಝೂರ್‌ರ ಈ ಭೇಟಿ 12.45 ಗಂಟೆಯವರೆಗೆ ನಡೆಯಿತು. ಕೊನೆಯಲ್ಲಿ ಎಲ್ಲ ಸದಸ್ಯರು ಹುಝೂರ್‌ರ ಜೊತೆಯಲ್ಲಿ ಚಿತ್ರ ತೆಗೆದುಕೊಳ್ಳುವ ಭಾಗ್ಯ ಪಡೆದರು.

ಹುಝೂರ್‌ರ ಅನ್ವರ್ ತಂಡದ ಎಲ್ಲ ಸದಸ್ಯರಿಗೆ ಲೇಖನಿ ನೀಡಿದರು. ಮತ್ತು ಮಕ್ಕಳಿಗೆ ಪ್ರೀತಿಯಿಂದ ಚಕ್ಲೇಟ್‌ಗಳನ್ನು ನೀಡಿದರು.

**(ಮುಂದುವರಿಯುವುದು)**

### *126 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ.

**ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.